

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 08 Issue : 12 Sunday 14-09-2025 E-mail : maruti.b.hosamani76@gmail.com Page: 4 Price : Rs. 1/-


## ಖಾಕಿ ಪಡೆ ಕಳ್ಳತನ ಪ್ರಕರಣ ಭೇದಿಸಿ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ




**ಸಿಹಿ ಕಹಿ ಸುದ್ದಿ,**

**ಆಲಮೇಲ :** 29 ಏಪ್ರಿಲ್ 2025 ರಾತ್ರಿ 10 ಗಂಟೆಯಿಂದ 30 ಏಪ್ರಿಲ್ 2025 ಬೆಳಿಗ್ಗೆ 6 ಗಂಟೆಯ ನಡುವಿನ ಸಮಯದಲ್ಲಿ ಗಾಲಿಬ್ ಚನ್ನವೀರಪ್ಪ ಹಡಪದ್ ಮತ್ತು ಮಂಜುನಾಥ್ ಗುರುಶಾಂತಪ್ಪ ಬೊಗೊಂಡಿ, ಹಾಗೂ ರಾಜಕುಮಾರ್ ನಾಗಪ್ಪ ಕೋಣಶಿರಸಿಗಿ ಎಂಬುವರ ಮೂರು ಮನೆಗಳ ಕಳ್ಳತನವಾಗಿರುವ ಪ್ರಕರಣ ದಾಖಲಾಗಿದ್ದು ಮೂರು ಮನೆಗಳ ಕಳ್ಳತನ ಪ್ರಕರಣವನ್ನು ಖಾಕಿ ಪಡೆ ಭೇದಿಸಿದ್ದು ಇಬ್ಬರು ಕಳ್ಳರನ್ನು ಬಂಧಿಸಿ 10,69,500 ಕಿಮ್ಮತ್ತಿನ ಬೆಳ್ಳಿ ಬಂಗಾರ ಹಾಗೂ ಹಣವನ್ನು ಕಳ್ಳತನ ಮಾಡಿಕೊಂಡು ಹೋದ ಬಗ್ಗೆ ಪಿರ್ಯಾದಿ ನೀಡಿದರ ಮೇರೆಗೆ ಆಲಮೇಲ ಪೊಲೀಸ್ ಠಾಣೆಯ ಗುನ್ನ ನಂಬರ್ 63/2025 ಕಲಂ 331 (4) 305 ಬಿ.ಎನ್.ಎಸ್ ಆಕ್ಟ್ 2023 ನೆದ್ದರ್ ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ಕಳ್ಳತನ ಮಾಡಿರುವ ಆರೋಪಿತರ ಪತ್ತೆ ಕುರಿತು ಶ್ರೀ ಲಕ್ಷ್ಮಣ್ ನಿಂಬರಗಿ ಪೊಲೀಸ್ ಅಧೀಕ್ಷಕರು ವಿಜಯಪುರ ಮತ್ತು ಶ್ರೀ ರಾಮನಗೌಡ ಹಟ್ಟಿ ಹೆಚ್ಚುವರಿ ಪೊಲೀಸ್ ಅಧಿಕ್ಷಕರು ಶ್ರೀ ಜಗದೀಶ್ ಎಚ್.ಎಸ್ ಪೊಲೀಸ್ ಉಪಾಧೀಕ್ಷಕರು ಇಂಡಿ ಶ್ರೀ ನಾನಗೋಡ ಪೊಲೀಸ್ ಪಾಟೀಲ್ ಸಿ.ಪಿ.ಐ ಸಿಂದಗಿ ಇವರ ಮಾರ್ಗದರ್ಶನದಲ್ಲಿ ತಂಡ ರಚನೆ ಮಾಡಿ ಸದರ ತಂಡದಲ್ಲಿ ಶ್ರೀ ಅರವಿಂದ್ ಅಂಗಡಿ ಪಿ.ಎಸ್.ಐ ಆಲಮೇಲ ಮತ್ತು ಎಸ್.ಎಮ್ ಪಡಶೆಟ್ಟಿ ಪಿ.ಎಸ್.ಐ ಅಪರಾಧ ವಿಭಾಗ ಹಾಗೂ ಆಲಮೇಲ ಠಾಣೆ ಸಿಬ್ಬಂದಿಗಳಾದ ಎಚ್.ಟಿ ಗೋಟೆಕಾರ್, ಸಲೀಂ.ಸವದಿ, ಸಿದ್ದರಾಮ್ ಪಾಟೀಲ್, ಎಸ್.ಬಿ ಯತ್ನಾಳ್ ವ್ಹಿ.ಎಸ್ ಆಲೂರ್ ಎಸ್.ಎಸ್ ಜಲಗೇರಿ ಬಿ.ಎಸ್ ಮೆಡೆದಾರ್, ಬಿ.ಜಿ ಕ್ಷತ್ರಿ ಈ ಪ್ರಕರಣ ತನಿಖಾ ತಂಡವು ಪ್ರಕರಣದಲ್ಲಿ ವೈಜ್ಞಾನಿಕ ವಿಧಾನ ದಿಂದ ತನಿಖೆ ಮಾಡಿ ಆಲಮೇಲ ಪೊಲೀಸ್ ಠಾಣೆ ಗುನ್ನೆ ನಂಬರ್ 34/2024 ಕಲಂ 457, 380, 379 ಐಪಿಸಿ ಮತ್ತು 63/2025 ಕಲಂ 331 (4) 305 ಬಿ.ಎನ್ ಎಸ್ ಆಕ್ಟ್ 2023 ನೆಡ್ಡವುಗಳನ್ನು ಭೇದಿಸಿ ಕಳ್ಳತನ ಮಾಡಿದ ಆರೋಪಿಗಳಾದ 1 ನೇ. ಶರಣಬಸು ತಂದೆ ಮಹಾದೇವಪ್ಪ ಜಾಲವಾದ್, 31 ವರ್ಷ ವಯಸ್ಸು 2 ನೇ. ಪ್ರಕಾಶ್ ತಂದೆ ನಿಂಗಪ್ಪ ಕಂಬಾರ್ ವಯಸ್ಸು 21 ವರ್ಷ ಈ ಇಬ್ಬರು ಚಿಕ್ಕರೋಗಿ ತಾಲೂಕು ದೇವರ ಹಿಪ್ಪರಗಿ ಜಿಲ್ಲೆ ವಿಜಯಪುರ ಇವರಿಂದ ಅಂದಾಜು 86 ಗ್ರಾಂ ಬಂಗಾರದ ಆಭರಣವನ್ನು ಮತ್ತು 67 ಗ್ರಾಂ ಬೆಳ್ಳಿ ಆಭರಣವನ್ನು ಹಾಗೂ ಐದು ಮೋಟಾರ್ ಸೈಕಲ್ ಗಳನ್ನು ವಶಪಡಿಸಿ ಕೊಂಡಿರುತ್ತಾರೆ ಆರೋಪಿಯನ್ನು ಬಂಧಿಸಿದ ಹಾಗೂ ಚುರುಕತನ ದಿಂದ ಕಾರ್ಯನಿರ್ವಹಿಸಿದ ಅಧಿಕಾರಿ ಹಾಗೂ ಸಿಬ್ಬಂದಿ ಕರ್ತವ್ಯವನ್ನು ಶ್ರೀ ಲಕ್ಷ್ಮಣ್ ನಿಂಬರಗಿ ಪೊಲೀಸ್ ಅಧಿಕ್ಷಕರು ವಿಜಯಪುರ ಅವರು ಶ್ಲಾಘಸಿರುತ್ತಾರೆ ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರೇವಣಸಿದ್ದಯ್ಯ. ಜಿ.ಹಿರೇಮಠ. ಆಲಮೇಲ**

## "ಪ್ರೀತಿಸುವ ಹೃದಯಗಳಿಗಾಗಿ–ಸಿಹಿಮಾತು"

**ಸಿಹಿ ಕಹಿ ಸುದ್ದಿ,**

ಪ್ರೀತಿ ಏಕೆ ಭೂಮಿ ಮೇಲಿದೆ? ಎಂಬ ಪ್ರಶ್ನೆಗೆ ಸಾಹಿತಿಗಳು,ನಿರ್ದೇಶಕರುತಮ್ಮದೇಶೈಲಿಯಲ್ಲಿ ಉತ್ತರಿಸಿದ್ದಾರೆ. ಪ್ರೀತಿಸುವ ಹೃದಯಗಳಿಗಾಗಿ ಈ ಪ್ರೀತಿ ಭೂಮಿ ಮೇಲಿದೆ ಒಂದು ವೇಳೆ ಪ್ರೀತಿಯು ಇಲ್ಲದಿದ್ದರೆ ಈ ಬದುಕಿಗೆ ಅರ್ಥವೇ ಇಲ್ಲದಂತಾಗುತ್ತದೆ. ಎರಡು ಹೃದಯಗಳು ಸಂಗಮವಾದಾಗ ಪ್ರೀತಿಯ ಜ್ಯೋತಿ ಹೊತ್ತಿ ಉರಿಯುವುದು ಅದು ಒಮ್ಮೊಮ್ಮೆ ಅರ್ಧದಲ್ಲಿಯೇ ದುಃಖವನ್ನು ನೀಡಿ ನಂದಿ ಹೋಗುವುದು,ಮತ್ತೊಮ್ಮೆಮದುವೆಯಹಂತಕ್ಕೆ ತಿರುಗಿ ಬದುಕೆ ಆನಂದಮಯವಾಗುವುದು. ಪ್ರೀತಿಗಾಗಿ ಪ್ರಾಣವನ್ನು ಕಳೆದುಕೊಂಡವರನ್ನು ನೋಡಿದ್ದೇವೆ ಅದರ ಬಗ್ಗೆ ಕೇಳಿದ್ದೇವೆ ಪ್ರಾಣ ಕಳೆದುಕೊಳ್ಳುವಂತಿದ್ದರೆ ಪ್ರೀತಿಸುವುದಾದರೂ ಯಾಕೆ? ಪ್ರೀತಿ ಎಂಬ ಸಸಿ ಮರವಾಗಿ ನೆರಳಾಗಿ ಮಾದರಿಯಾಗಬೇಕೆ ವಿನಃ ಅದೊಂದು ದುರಂತ ಪ್ರೇಮ ಕಥೆಯಾಗಬಾರದು. ಹುಡುಗ ಹುಡುಗಿಯನ್ನು ಹುಡುಗಿ ಹುಡುಗನನ್ನು ಎಷ್ಟರಮಟ್ಟಿಗೆ ಪ್ರೀತಿಸುವರು ಅನ್ನುವುದು ಮುಖ್ಯವಲ್ಲ ಪ್ರೀತಿಗೆ ಎಷ್ಟು ಗೌರವ ಕೊಡುತ್ತಾರೆ ಎಂಬ ಪ್ರಾಮಾಣಿಕ ಮನಸ್ಸು ಬಹಳ ಮುಖ್ಯವಾಗಿದೆ. ಹೆಂಡತಿಗಾಗಿ ಬೆಟ್ಟವನ್ನು ಕೊರೆದು ಇಡೀ ಊರಿಗೆ ದಾರಿ ಮಾಡಿಕೊಟ್ಟ ದಶರಥ ಮಾಂಜಿಯ ಪ್ರೇಮ ಕಥೆ ಪ್ರೀತಿಸುವ ಹೃದಯಗಳಿಗೆ ಒಂದು ಸ್ಪೂರ್ತಿ ಅಂತಹ ನಿಷ್ಕಲ್ಮಶವಾದ ಪ್ರೀತಿಗಳು ಮಾತ್ರ ದಂತಕತೆಯಾಗಿ ಉಳಿಯಲು ಸಾಧ್ಯ.

ಪ್ರೀತಿಸುವುದಾದರೆ ಒಬ್ಬರನ್ನು ಪ್ರೀತಿಸಬೇಕು ಮನಸ್ಸುಗಳು ಅರ್ಥವಾಗಲು ಎಷ್ಟು ವರ್ಷಗಳೇ ಬೇಕು ನಲಿವಿರಲಿ ನೋವಿರಲಿ ಒಂದೇ ಪ್ರೀತಿ ಇರಲಿ ಬಣ್ಣ ಬಣ್ಣದ ಮಾತಿಗೆ ಮರುಳಾಗಿ ತಿಂಗಳಿಗೊಬ್ಬರನ್ನು ಪ್ರೀತಿಸುತ್ತಾ ಹೋದರೆ ಅದು ಪ್ರೀತಿಯಾಗಲ್ಲ ಹಲವು ರೀತಿಯ ಆಶಾ ಮನೋಭಾವನೆ. ಈಗಲೂ ಕೆಲವರು ಪ್ರಾಮಾಣಿಕವಾದ ಶುದ್ಧ ಮನಸ್ಸಿನಿಂದ ಒಬ್ಬರನ್ನೊಬ್ಬರು ಬಿಟ್ಟಿರಲಾರದಷ್ಟು ಪ್ರೀತಿಸುತ್ತಿದ್ದಾರೆಪ್ರೀತಿಯುಒಮ್ಮೊಮ್ಮೆಎಲ್ಲರನ್ನು ಮರೆಸುತ್ತದೆ ಆದರೆ ನಾವು ಮರೆಯಬಾರದು ಹೆತ್ತವರ ಪ್ರೀತಿಯ ಮುಂದೆ ಉಳಿದ ಎಲ್ಲಾ ಪ್ರೀತಿಗಳು ಅಷ್ಟಕ್ಕಷ್ಟೇ.




ಇತ್ತೀಚಿನ ದಿನಮಾನಗಳಲ್ಲಿ ಪ್ರೀತಿ ಪ್ರೇಮಗಳು ಕೊಲೆ ಅತ್ಯಾಚಾರ ರೂಪವನ್ನು ಪಡೆದುಕೊಂಡು ಅಂತ್ಯವಾಗುತ್ತಿವೆ. ದಯವಿಟ್ಟು ಪ್ರೀತಿಸುವ ವ್ಯಕ್ತಿಗಳ ಬಗ್ಗೆ ಅವರ ಗುಣಗಳ ಬಗ್ಗೆ ಅರಿತುಕೊಂಡು ಪ್ರೀತಿಸಬೇಕಾಗುತ್ತದೆ. ಪ್ರೀತಿ ಮಾಡುವುದು ತಪ್ಪಲ್ಲ ಸರಿಯಿಲ್ಲದ ವ್ಯಕ್ತಿಗಳನ್ನು ಪ್ರೀತಿಸುವುದು ತಪ್ಪು, ಅವರ ಬಗ್ಗೆ ಹಿಂದೆ ಮುಂದೆ ಏನು ಗೊತ್ತಿಲ್ಲದೆ ಪ್ರೀತಿಸುವುದು ತಪ್ಪು, ನಮ್ಮ ಸ್ವಾಭಿಮಾನ ಘಣತೆ ಕುಟುಂಬದ ಗೌರವ ಬಿಟ್ಟು ಪ್ರೀತಿಸುವುದು ತಪ್ಪು, ಬದುಕಿನಲ್ಲಿ ನಾವು ಒಂದು ಹಂತಕ್ಕೆ ಬಾರದೆ ಪ್ರೀತಿಸುವುದು ತಪ್ಪು, ಸರಿಯಾಗಿ ಓದುವ ಸಮಯದಲ್ಲಿ ಪ್ರೀತಿಸುವುದು ತಪ್ಪು, ಹೆತ್ತವರಿಗೆ ಮೋಸ ಮಾಡಿ ಪ್ರೀತಿಸುವುದು ತಪ್ಪು, ಪ್ರೀತಿಸುವುದಾದರೆ ಮದುವೆಯ ನಂತರ ಹೆಂಡತಿ ಗಂಡನನ್ನು ಗಂಡ ಹೆಂಡತಿಯನ್ನು ಸಾಗರದಷ್ಟು ಪ್ರೀತಿಸಲಿ ಆ ಪ್ರೀತಿಗೆ ಒಂದು ಅರ್ಥವಿದೆ.

ಪ್ರೀತಿ ಮಾಡುವ ಹೃದಯದ ಬಡಿತದಲ್ಲಿ ಧೈರ್ಯದ ತುಡಿತವಿರಬೇಕು. ಒಂದು ಹೃದಯವನ್ನು ಪ್ರೀತಿಸಿ ಪ್ರೇಮವನ್ನು ತೋರಿದಾಗ ಅದನ್ನು ಒಬ್ಬರು ಒಲ್ಲೆ ಎನ್ನುತಾರೆ ಎಂದಿಟ್ಟುಕೊಳ್ಳಿ. ಆಗಲೂ ಆ ಪ್ರೀತಿಯ ಭಾವನೆಯನ್ನು ಹಾಗೆಯೇ ಉಳಿಸಿಕೊಳ್ಳುವ ಎದೆಗಾರಿಕೆ ಇರುವವರು ಮಾತ್ರ ಪ್ರೀತಿಸಲು ಅರ್ಹರು. ಆದರೆ ವಾಸ್ತವ ಹಾಗಿಲ್ಲ. ಪ್ರೀತಿ ಮಾಡಿದವರು ದೂರ ಸರಿದಾಗ ಪ್ರಾರಂಭದಲ್ಲಿ ಸ್ವಲ್ಪ ನೊಂದುಕೊಂಡು ಬರಬರುತ್ತಾ ಅವರ ಮೇಲಿನ ಅಭಿಮಾನವನ್ನು ಕರಗಿಸಿಕೊಂಡು ಬಿಡುವುದು ಸಾಧಾರಣ. ಇದು ಮನಷ್ಯ ಪ್ರೀತಿ. ಅಬ್ಬಬ್ಬಾ ಎಂದರೂ ಅದರ ಛಾಯೆ ಮಾತ್ರ ಉಳಿದಿರುತ್ತದೆಯೇ ವಿನಾ ಪ್ರಾರಂಭದಲ್ಲಿ ಇರುವ ಆ ತೀವ್ರತೆ ಉಳಿದಿರುವುದಿಲ್ಲ. ಯಾಕೆ ಹೀಗೆ? ನಮ್ಮನ್ನು ನಾವು ಪ್ರಶ್ನಿಸಿಕೊಂಡಾಗ ಇವೆಲ್ಲ ಮಾನವ ಸಹಜ, ಇದೆಲ್ಲ ಕಾಲ ನಿಯಮ ಎನ್ನುವ ಉತ್ತರದ ಮುಸುಕಿನ ಅಡಿಯಲ್ಲಿ ಸೇರಿ ಹೋಗುತ್ತೇವೆಯೇ ವಿನಾ ಕಾರಣಗಳನ್ನು ನಿಜವಾಗಿ ಕಂಡುಕೊಳ್ಳುವ ಸಹನೆ ನಮಗಿರುವುದಿಲ್ಲ. ಹೀಗಲ್ಲವಾದರೆ, ಪ್ರೀತಿಸಿದ ವ್ಯಕ್ತಿ ದೂರವಾದಾಗ ಸೇಡಿನ ಕಿಚ್ಚು ಹಚ್ಚಿಸಿಕೊಂಡು ಬಲಿಯನ್ನು ಬಯಸುವುದು. ಹೂವು ಅರುಳುವಷ್ಟೇ ಸಹಜ ಹರೆಯದಲ್ಲಿ ಪ್ರೀತಿ ಅರಳುವುದು. ಪ್ರೀತಿಯ ಬಗ್ಗೆ ಏನು ಬರೆಯುತ್ತೀರಿ, ಎಷ್ಟು ಬರೆಯುತ್ತೀರಿ ಅಗೆದಷ್ಟು, ಬಗೆದಷ್ಟು ಬತ್ತದ ಝುರಿಯಂತೆ ಅದು ಹರಿಯುತ್ತಲೇ ಇರುತ್ತದೆ.

**– ಶ್ರೀ ಮುತ್ತು ಯ.ವಡ್ಡರ**
**ಶಿಕ್ಷಕರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ**
**ಹಿರೇಮಳಗಾವಿ – ಬಾಗಲಕೋಟ**
**9845568484**

## ತೇರದಾಳ ತಾಲೂಕು ಕಸಾಪ ಘಟಕದ ಉದ್ಘಾಟನೆ

**ತೇರದಾಳ :** ನೂತನ ತಾಲೂಕಾಗಿರುವ ತೇರದಾಳ ತಾಲೂಕು ಕಸಾಪ ಘಟಕ ಉದ್ಘಾಟನೆಗೊಂಡಿರುವುದು ಸಂತಸದ ಸಂಗತಿಯಾಗಿದೆ. ಕಸಾಪದಿಂದ ಕನ್ನಡ ಭಾಷೆಯ ಮೌಲ್ಯ ಮತ್ತಷ್ಟು ಗಟ್ಟಿಗೊಳ್ಳುವಂತಾಗಲಿ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಇಲ್ಲಿನ ಪ್ರಭುಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ತೇರದಾಳ ತಾಲೂಕು ಕಸಾಪ ಘಟಕ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯಕ್ಕೆ ಬಹಳ ದೊಡ್ಡ ಶಕ್ತಿ ಇದೆ. ಆದ್ದರಿಂದ ಸಾಹಿತ್ಯಿಕ ಚಟುವಟಿಕೆಗಳು ಈ ಭಾಗದಲ್ಲಿ ನಿರಂತರವಾಗಿ ನಡೆಯಬೇಕು. ಸರಕಾರ ಹಾಗೂ ಸಾಹಿತ್ಯ ಪರಿಷತ್ ನೀಡುವ ಸೌಲಭ್ಯಗಳ ಸದುಪಯೋಗವಾಗಬೇಕೆಂದು ಹೇಳಿದರು.




ತಹಶೀಲ್ದಾರ್ ವಿಜಯಕುಮಾರ ಕಡಕೋಳ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ ಮೂಲಕ ಅಲ್ಲಮನ ಕ್ಷೇತ್ರ ಮತ್ತಷ್ಟು ಬೆಳೆಯುವಂತಾಗಲಿ. ವಚನ ಸಾಹಿತ್ಯದ ಜತೆಗೆ ನಾಡಿನ ನೆಲ ಜಲದ ಕುರಿತು ಜಾಗೃತಿ ಮೂಡುವಂತಾಗಲಿ ಎಂದು ಆಶಿಸಿದರು. ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ, ಮಾಜಿ ಅಧ್ಯಕ್ಷ ಬಸವರಾಜ ಬಾಳಿಕಾಯಿ, ನೌಕರರ ಸಂಘದ ತಾಲೂಕು ಅಧ್ಯಕ್ಷ ಬಸವರಾಜ ಹನಗಂಡಿ, ತಾಲೂಕು ಸಮಿತಿ ಅಧ್ಯಕ್ಷ ಭುಜಬಲಿ ಕೆಂಗಾಲಿ ಸೇರಿದಂತೆ ಇನ್ನೂ ಹಲವರು ಕನ್ನಡ ಭಾಷೆ ಹಾಗೂ ಸಾಹಿತ್ಯದ ಕುರಿತು ತಮ್ಮ ವಿಚಾರಗಳನ್ನು ಹಂಚಿಕೊಂಡರು.

ಅಲ್ಲಮಪ್ರಭು ದೇವಸ್ಥಾನ ಅರ್ಚಕ ಬಸಪರಯ್ಯ ಬಾವಿ ಸಾನಿಧ್ಯ ವಹಿಸಿದ್ದರು. ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಪ್ರವೀಣ ನಾಡಗೌಡ, ಪುರಸಭೆ ಉಪಾಧ್ಯಕ್ಷೆ ನಸ್ರೀನ್ಬಾನು ನಗಾರ್ಜಿ, ಅನ್ನಪ್ರಸಾದ ಸಮಿತಿ ಅಧ್ಯಕ್ಷ ಬಸವರಾಜ ಕರಲಟ್ಟಿ, ಕಸಾಪ ತೇರದಾಳ ತಾಲೂಕು ಅಧ್ಯಕ್ಷ ಗಂಗಾಧರ ಮೋಪಗಾರ, ಕರವೇ ಅಧ್ಯಕ್ಷ ಮೈನುದ್ದೀನ ಮೊಕಾಸಿ, ಸಿದ್ದೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಶಂಕರ ಅಥಣಿ ಇನ್ನಿತರರು ಉಪಸ್ಥಿತರಿದ್ದರು.

## ಶಿಕ್ಷಕರು ಪ್ರತಿನಿತ್ಯ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು

**ರಬಕವಿ :** ಶಿಕ್ಷಕರು ಪ್ರತಿನಿತ್ಯ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ರಬಕವಿ –ಬನಹಟ್ಟಿಯ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯೆ ಚಂದ್ರಪ್ರಭಾ ಬಾಗಲಕೋಟ ಹೇಳಿದರು.



ಅವರು ರಬಕವಿ ಎಜ್ಯುಕೇಶನ್ ಸೊಸೈಟಿಯು ಎಂ.ವ್ಹಿ. ಪಟ್ಟಣ ಸಂಸ್ಥೆಯ ಶಾಲಾ ಕಾಲೇಜುಗಳ ಶಿಕ್ಷಕರಿಗಾಗಿ ಏರ್ಪಡಿಸಿದ್ದ ಶಿಕ್ಷಕ ದಿನಾಚರಣೆಸಮಾರಂಭದಲ್ಲಿಮುಖ್ಯ ಅತಿಥಿಗಳಾಗಿ ಮಾತನಾಡಿದರು. ಎಂದಿಗಿಂತಲೂ ಈಗ ಶೈಕ್ಷಣಿಕ ವಾತಾವರಣ ಬಹಳ ಕ್ಲಿಷ್ಟವಾದ ಪರಿಸ್ಥಿತಿ ಎದುರಿಸುತ್ತಿದೆ. ಟಿ.ವಿ., ಮೊಬೈಲ್, ಇಂಟರ್ ನೆಟ್ ಗಳಂತಹ ಸಂವಹನ ಮಾಧ್ಯಮಗಳು ಬಂದ ನಂತರ ಮಕ್ಕಳ ಮನಃಸ್ಥಿತಿ ಅನಿಯಂತ್ರಿತವಾಗಿದೆ.

ಅವರನ್ನು ಹಿಡಿದಿಟ್ಟುಕೊಳ್ಳುವ ರೀತಿಯಲ್ಲಿ ಪಾಠ ಮಾಡುವುದು ಬಹುದೊಡ್ಡ ಸವಾಲಿನ ಕೆಲಸವಾಗಿದೆ. ಅದಕ್ಕಾಗಿ ಪ್ರತಿ ನಿತ್ಯ ಶಿಕ್ಷಕರು ಹೊಸ ಹೊಸ ಸಂಗತಿಗಳನ್ನು ಹಾಗೂ ಮಾಹಿತಿಗಳನ್ನು ಅಪ್ಡೇಟ್ ಮಾಡಿಕೊಳ್ಳುತ್ತ ಇರಬೇಕಾಗುತ್ತದೆ.

ಎಷ್ಟೇ ಮುಂದುವರಿದರೂ ಪುಸ್ತಕಗಳನ್ನು ಓದುವುದರಿಂದ ಅವು ಕೊಡುವ ಜ್ಞಾನ, ಸಮಾಧಾನ, ಮನಶಾಂತಿ ಬೇರೆಲ್ಲೂ ಸಿಗಲಾರದು ಎಂದರು.

ನಿವೃತ್ತ ಉಪನ್ಯಾಸಕ ಎಂ. ಎಸ್. ಬದಾಮಿ, ಸಂಸ್ಥೆಯ ನಿರ್ದೇಶಕ ಬಸವರಾಜ ಮಟ್ಟಿಕಲ್ಲಿ ಮಾತನಾಡಿದರು. ಶಿಕ್ಷಣ ಸಂಸ್ಥೆಯ ಚೇರಮನ್ ಬಸವರಾಜ ಮಹಾದೇವಪ್ಪ ಯಂಡಿಗೇರಿ ಅಧ್ಯಕ್ಷತೆ ವಹಿಸಿದ್ದರು. ಬಸವರಾಜ ಅಮ್ಮಲಜೇರಿ ಕಾರ್ಯಕ್ರಮ ನಿರ್ವಹಿಸಿದರು.

ನಿರ್ದೇಶಕರಾದ ವೀರೂ ಸಿದ್ದಗಿರಿ ಹೊಸಮನಿ, ಈಶ್ವರ ಬೀಳಗಿ, ಪ್ರಾಚಾರ್ಯ ಬಿ. ಎಸ್. ಕಾಂಬಳೆ, ಆಶಾ ಮುದ್ದಾಪೂರ ಮುಖ್ಯಾಧ್ಯಾಪಕರಾದ ಬಿ. ಎಸ್. ಪಾಟೀಲ, ಪಿ. ಎಚ್. ಪ್ರತಾಪ್ ವೇದಿಕೆಯ ಮೇಲೆ ಆಸೀನರಾಗಿದ್ದರು.

## ಹುನಗುಂದ ತಹಶೀಲ್ದಾರ ಕಾರ್ಯಾಲಯಕ್ಕೆ ಜಿಲ್ಲಾಧಿಕಾರಿ ಭೇಟಿ





**ಹುನಗುಂದ :** ಇಂದು ದಿನಾಂಕ:09–09–2025 ರಂದು ಜಿಲ್ಲಾಧಿಕಾರಿಗಳು, ಬಾಗಲಕೋಟೆರವರು ಹುನಗುಂದ ತಹಶೀಲದಾರ ಕಾರ್ಯಾಲಯಕ್ಕೆ ಭೇಟಿ ನೀಡಿ, ಕಚೇರಿಯ ಸಿಬ್ಬಂಧಿಗಳ ಕಾರ್ಯವೈಖರಿಯನ್ನು ಪರಿಶೀಲಿಸಿ, ತಮ್ಮ ಸಂಕಲನಕ್ಕೆ ಸಂಬಂಧಿಸಿದಂತೆ ಸ್ವೀಕೃತಿಯಾಗಿರುವ ಅರ್ಜಿಗಳು ಸಕಾಲದಲ್ಲಿ ವಿಲೇವಾರಿ ಮಾಡುವಂತೆ ಸಿಬ್ಬಂಧಿಗಳಿಗೆ ನಿರ್ದೇಶಿಸಿದರು.

ನಂತರ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಕಛೇರಿಗೆ ಬೇಟಿ ನೀಡುವ ಸಾರ್ವಜನಿಕರೊಡನೆ ಸೌಜನ್ಯಯುತವಾಗಿ ವರ್ತಿಸಿ, ಅವರ ಸಮಸ್ಯೆಗಳನ್ನು ಆಲಿಸಿ, ನಿಯಮಾನುಸಾರ




ಕ್ರಮವಹಿಸುವಂತೆ ಗ್ರೇಡ್–2 ತಹಶೀಲದಾರರಿಗೆ ಸೂಚಿಸಿದರು.

ತಹಶೀಲದಾರ ಕಚೇರಿಯ ಅಭಿಲೇಖಾಲಯವನ್ನು ಬೇಟಿ ನೀಡಿ, ಭೂ ಸುರಕ್ಷಾ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿದರು. ಅಭಿಲೇಖಾಲಯದ ವಿಷಯ ನಿರ್ವಹಕರಿಗೆ ಅಭಿಲೇಖಾಲಯದಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ಸ್ವೀಕೃತಿ ರಜಿಸ್ಟರ್ ದಾಖಲಿಸುವಂತೆ ಸೂಚಿಸಿದರು.

ಕಾರ್ಯಾಲಯದ ಆಧಾರ ಕಾರ್ಡ ವಿಭಾಗಕ್ಕೆ ಬೇಟಿ ನೀಡಿ, ಜನಸಂದಣಿಯಾಗದಂತೆ ಕ್ರಮ ವಹಿಸುವಂತೆಹಾಗೂಮಹಿಳೆಯರು/ಮಕ್ಕಳ ಆಧಾರ ಕಾರ್ಡಗಳನ್ನು ತೀವ್ರಗತಿಯಲ್ಲಿ ಮಾಡುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಬಾಗಲಕೋಟೆಯ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಹುನಗುಂದ ಗ್ರೇಡ್–2 ತಹಶೀಲದಾರ ಮಹೇಶ ಸಂಧಿಗವಾಡ, ಶಿರಸ್ತೇದಾರ ಎಚ್.ಎಮ್ ಶಿವಣಗಿ, ಎಸ್.ಎ ಮುಂಡೆವಾಡಿ ಹಾಗೂ ಇತರೆ ಅಧಿಕಾರಿಗಳು ಹಾಜರಿದ್ದರು.

## ನೇಮಿನಾಥ ಜಮಖಂಡಿಗೆ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ



**ತೇರದಾಳ:** ಶಿಕ್ಷಕವೃತ್ತಿಎಂಬುದುಬಹಳಷ್ಟುಶ್ರೇಷ್ಠವಾದ ವೃತ್ತಿಯಾಗಿದೆ. ಶಿಕ್ಷಕರಾದವರು ತಮ್ಮ ಜವಾಬ್ದಾರಿಯನ್ನು ಬಹಳಷ್ಟು ಅಚ್ಚುಕಟ್ಟಾಗಿ ನಿರ್ವಹಿಸಿದಾಗ ಮಾತ್ರ ಸಮಾಜದಲ್ಲಿ ಉತ್ತಮ ನಾಗರಿಕರು ಬೆಳೆಯಲು ಸಾಧ್ಯ ಎಂದು ಇಲ್ಲಿನ ಜೆವಿ ಮಂಡಳ ಕಾರ್ಯದರ್ಶಿ ಡಾ. ಜೆ. ಬಿ. ಆಲಗೂರ ಹೇಳಿದರು.

ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದ ನೇಮಿನಾಥ ಜಮಖಂಡಿ ಅವರಿಗೆ ಅಭಿನಂದನಾ ಸಮಾರಂಭ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಕ್ಷಕರನಂಬಿಕೆಮೇಲೆಪಾಲಕರುಮಕ್ಕಳನ್ನುಶಾಲೆಗಳಿಗೆ ಕಳುಹಿಸುತ್ತಾರೆ. ಆದ್ದರಿಂದ ಶಿಕ್ಷಕರು ಮಕ್ಕಳಲ್ಲಿ ಬೇಧ ಭಾವ ಮಾಡದೆ ಗುಣಾತ್ಮಕ ಶಿಕ್ಷಣ ನೀಡುವುದರ ಜತೆಗೆ ಸಾಮಾಜಿಕ ಜವಾಬ್ದಾರಿ ಕುರಿತು ಜಾಗೃತಿ ಮೂಡಿಸಬೇಕೆಂದು ಹೇಳಿದರು. ಜಿಲ್ಲಾ ಅತ್ಯುತ್ತಮ ಪ್ರಶಸ್ತಿ ಪಡೆದ ನೇಮಿನಾಥ ಜಮಖಂಡಿ ಮಾತನಾಡಿ, ನನ್ನ ಕೆಲಸ ಗಮನಿಸಿ ಪ್ರಶಸ್ತಿ ನೀಡಿರುವುದಕ್ಕೆ ಶಿಕ್ಷಣ ಇಲಾಖೆಗೆ ಅಭಿನಂದಿಸುತ್ತೇನೆ.

ಸಂಸ್ಥೆಯಲ್ಲಿ ಆಡಳಿತ ಮಂಡಳಿಯ ಸಹಕಾರ ಹಾಗೂ ಸಹದ್ಯೋಗಿಗಳ ಪ್ರೋತ್ಸಾಹ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಕಾರ್ಯಾಧ್ಯಕ್ಷ ಡಿ. ಆರ್. ಪಾಟೀಲ, ಶಿಕ್ಷಕ ಸುರೇಶ ಸಾವಂತನವರ ಮಾತನಾಡಿದರು. ಕೋಶಾಧ್ಯಕ್ಷ ಮಲ್ಲಿನಾಥ ಅಸ್ಕಿ, ಕಿರಣ ಕುಳ್ಳಿ, ಎಸ್. ಎನ್. ಹೆಬ್ಬಾಳೆ, ಡಿ. ಬಿ. ಪಾಟೀಲ, ಸಂತೋಷ ಕುಳ್ಳಿ, ಬಡಿಗೇರ, ಖವಟಕೊಪ್ಪ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

# ಚಾಂದಬಿ ಬಿಜಾಪೂರ ಅವರಿಗೆ ಆದರ್ಶ ಶಿಕ್ಷಕಿ ಪ್ರಶಸ್ತಿ

**ವರದಿ:ಲಾಲಸಾಬ ಸವಾರಗೋಳ**




**ವಿಜಯಪುರ :** ನಗರದ ರಾಜರಾಜೇಶ್ವರಿ ಕಲ್ಯಾಣ ಮಂಟಪದಲ್ಲಿ ನಡೆದ ಅಲ್ಹಜ್ ದಿ. ನಬಿಪಟೇಲ ವಡಗೇರಿ ಇವರ ಸಂಸ್ಮರಣ "ವಡಗೇರಿ ನಮಃ" ಹಾಗೂ ಬಿ.ಆರ್. ಪೊಲೀಸ್ ಪಾಟೀಲ ವಿರಚಿತ ನಬಿ ಮಾಸ್ತರರ ತುಲಾಭಾರ ಪ್ರಸಂಗ ಮತ್ತು ತುಲಾಭಾರ ನಾಟಕ ಗ್ರಂಥ-ಗಳ ಲೋಕಾರ್ಪಣೆ ಹಾಗೂ ಆದರ್ಶ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಳವಾಡದ ಸರ್ಕಾರಿ ಶಾಲೆಯ ಶಿಕ್ಷಕಿ ಹಾಗೂ ಕರುನಾಡು ಸಾಹಿತ್ಯ ಪರಿಷತ್ತಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಚಾಂದಬಿ ಬಿಜಾಪೂರರವರಿಗೆಆದರ್ಶ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇವರು ಕನ್ನಡದಲ್ಲಿ ಕವಿತೆಗಳನ್ನು ಬರೆಯುತ್ತಾ ಸಾಹಿತ್ಯ ಸಂಘಟನೆಯಲ್ಲಿತೊಡಗಿಕೊಂಡು ಕನ್ನಡದ ಸೇವೆ ಮಾಡುತ್ತಿರುವ ಅಪರೂಪದ ಶಿಕ್ಷಕಿಯಾಗಿದ್ದಾರೆ. ಇವರಿಗೆ ಪ್ರಶಸ್ತಿ ದೊರಕಿರುವುದು ತಮ್ಮ ಸಹೋದ್ಯೋಗಿ ಶಿಕ್ಷಕರಿಗೆ ಹಾಗೂ ಕರುನಾಡು ಸಾಹಿತ್ಯ ಪರಿಷತ್ತಿನ ಸರ್ವ ಪದಾಧಿಕಾ-ರಿಗಳಿಗೆ ಸಂತಸ ತಂದಿದೆ.

ದಿವ್ಯ ಸಾನ್ನಿಧ್ಯವನ್ನು ಪೂಜ್ಯ ಜಗದೇವ ಮಲ್ಲಬೊಮ್ಮಯ್ಯ ಸ್ವಾಮಿಗಳು ವಿರಕ್ತಮಠ, ಅಲಮೇಲ ಹಾಗೂ ಸಾನ್ನಿಧ್ಯವನ್ನು ಪೂಜ್ಯ ಡಾ. ಎಫ್. ಎಚ್. ಇನಾಮದಾರ ಪೀಠಾಧಿಪತಿಗಳು, ಸಯ್ಯದ ಹುಸೇನ್ ಪೀರ ಆಶ್ರಮ, ಮನಗೂಳಿ ಅವರು ವಹಿಸಿದ್ದರು. ಅಧ್ಯಕ್ಷತೆಯನ್ನು ರಾಜುಗೌಡ ಪಾಟೀಲ ಶಾಸಕರು, ದೇವರಹಿಪ್ಪರಗಿ ಮತಕ್ಷೇತ್ರ ರವರು ವಹಿಸಿದ್ದರು. ಉದ್ಘಾಟನೆಯನ್ನು ಸಂಗಮೇಶ ಅ. ಬಬಲೇಶ್ವರ ಅಧ್ಯಕ್ಷರು, ಕರ್ನಾಟಕ ಬಾಲ ವಿಕಾಸ ಅಕಾಡೆಮಿ, ಧಾರವಾಡ ಅವರು ನೆರವೇರಿಸಿದರು. ಬಸವರಾಜ ಯಲಿಗಾರ ಡಿವೈಎಸ್ ಪಿ, ವಿಜಯಪುರ ಅವರು ಗ್ರಂಥ ಬಿಡುಗಡೆ ಮಾಡಿದರು. ಪ್ರೊ. ಬಿ. ಆರ್. ಪೊಲೀಸ್ ಪಾಟೀಲ ನಿವೃತ್ತ ಪ್ರಾಂಶುಪಾಲರು ಹಾಗೂ ಸಾಹಿತಿಗಳು, ಬನಹಟ್ಟಿ ಅವರು ಗ್ರಂಥ ಪರಿಚಯ ಮಾಡಿದರು.

ಮುಖ್ಯ ಅತಿಥಿಗಳಾಗಿ ವಿ. ಎ. ಮಾಚಕನೂರ, ವಿಶ್ರಾಂತ ಆಯುಕ್ತಕರು, ಸಾ.ಶಿ.ಇ. ಧಾರವಾಡ. ಡಾ. ಸಿದ್ದಣ್ಣ ಲಂಗೋಟಿ, ಗೌರವ ಸಂಪಾದಕರು, ಬಸವ ಬೆಳಗು ಪತ್ರಿಕೆ, ರಾಮದುರ್ಗ.ಡಾ. ಆರ್. ಕೆ. ಕುಲಕರ್ಣಿ ನಿವೃತ್ತ ಪ್ರಾಂಶುಪಾಲರು ಹಾಗೂ ಹಿರಿಯ ಸಾಹಿತಿಗಳು, ವಿಜಯಪುರ ಭಾಗವಹಿಸಿದ್ದರು

ಡಾ. ಎಂ. ಎಸ್. ಮದಭಾವಿ, ಗೌರವ ಸಂಪಾದಕರು, ಹಾಗೂ ಕಾರ್ಯದರ್ಶಿಗಳು ಡಾ. ಫ.ಗು ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಯಪುರ, ಡಾ॥ ಶ್ರೀಶೈಲ ತರಡಿ, ಸಂಪಾದಕರು ಹಾಗೂ ವಿಶ್ರಾಂತ ಜಿಲ್ಲಾ ಆರೋಗ್ಯ ಅಧಿಕಾರಿಗಳು, ವಿಜಯಪುರ, ಡಾ. ವಿ ಎಂ ಬಾಗಾಯತ, ಸಂಪಾದಕರು ಹಾಗೂ ಹಿರಿಯ ಸಾಹಿತಿಗಳು, ವಿಜಯಪುರ, ಶ್ರೀ ಮಲ್ಲಣ್ಣ ಮದಭಾವಿ, ನಿವೃತ್ತ ಪ್ರೌಢಶಾಲಾ ಶಿಕ್ಷಕರು, ವಿಜಯಪುರ, ಶ್ರೀ ಜಗದೇವ ಎಸ್. ಗಲಗಲಿ ,ನಿವೃತ್ತ ಬ್ಯಾಂಕ್ ಮ್ಯಾನೇಜರ್, ವಿಜಯಪುರ ,ಡಾ. ವಿ. ಡಿ. ಐಹೊಳ್ಳಿ, ನಿವೃತ್ತ ಪ್ರಾಚಾರ್ಯರು, ವಿಜಯಪುರ ಸೇರಿದಂತೆ ಅನೇಕರು ಉಪಸ್ಥಿತ-ರಿದ್ದರು.

# ಅದ್ದೂರಿ ದಸರಾ ಹಬ್ಬ ಆಚರಣೆ: ಭಕ್ತರಿಂದ ಸಮ್ಮತಿ

**ಜಮಖಂಡಿ :** ನಾಡಹಬ್ಬ ದಸರಾ ಹಬ್ಬವನ್ನು ಭಕ್ತರ ನೇತೃತ್ವದಲ್ಲಿ ಆಚರಿಸುವ ಮೂಲಕ ಪ್ರತಿಯೊಬ್ಬರೂ ತನು, ಮನ, ಧನದಿಂದ ಸಹಕಾರ ನೀಡುವ ಮೂಲಕ ಮಾದರಿಯಾಗಿ ಆಚರಿಸೋಣ ಎಂದು ಬಿಡಿಸಿಸಿ ಬ್ಯಾಂಕ ನಿರ್ದೇಶಕ ಏಗಪ್ಪ ಸವದಿ ಹೇಳಿದರು.



ನಗರದ ಮುತ್ತಿನಕಂತಿ ಹಿರೇಮಠದ ಸಭಾ ಭವನದಲ್ಲಿ ನಾಡಹಬ್ಬ ದಸರಾ ಆಚರಣೆ ನಿಮಿತ್ಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿ ಆಚರಣೆಯಲ್ಲಿ ಹಬ್ಬಗಳ ಆಚರಣೆಗೆ ವಿಶೇಷ ಸ್ಥಾನವಿದೆ. ನಗರದಲ್ಲಿ ನಾಡಹಬ್ಬವನ್ನು ಸಡಗರದಿಂದ ಆಚರಿಸುವ ಮೂಲಕ ಧಾರ್ಮಿಕ ಸೇವೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಓಲೇಮಠದ ಆನಂದದೇವರು ಸಾನಿಧ್ಯ ವಹಿಸಿ ಮಾತನಾಡಿ, ಮುತ್ತಿನಕಂತಿ ಮಠದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಗಳು ವಿಶೇಷವಾಗಿರುತ್ತವೆ.

ನಾನು ಕೂಡ ಸೇವಕನಾಗಿ ಶ್ರೀಮಠದ ಭಕ್ತಿಯಲ್ಲಿ ಸೇವೆ ಮಾಡಲು ಸಿದ್ಧನಾಗಿದ್ದು, ಶ್ರೀಗಳು ವಹಿಸುವ ಸೇವೆಯನ್ನು ನಾನು ಕೂಡ ಮಾಡುತ್ತೇನೆ. ಅದರಂತೆ ಒಂಭತ್ತು ದಿನದ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರು ಭಾಗವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸೋಣ. ಮುತ್ತಿನಕಂತಿ ಹಿರೇಮಠ ಮತ್ತು ಓಲೇಮಠ ಒಂದು ದೇಹದ ಎರಡು ಕಣ್ಣುಗಳು. ಭಕ್ತರ ಸೇವೆಯಲ್ಲಿ ಎರಡೂ ಮಠಗಳು ತೊಡಗಿಕೊಂಡಿವೆ ಎಂದರು.

ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರು ಮಾತನಾಡಿ, ಕಳೆದ ಹತ್ತು ವರ್ಷಗಳಿಂದ ಶ್ರೀಮಠದಲ್ಲಿ ದಸರಾ ಹಬ್ಬವನ್ನು ಅರ್ಥಪೂರ್ಣವಾಗಿ ಆಚ-ರಿಸಲಾಗುತ್ತಿದೆ. ಭಕ್ತರ ವಂತಿಕೆಯಲ್ಲಿ, ಭಕ್ತರ ಸೇವೆಯಲ್ಲಿ ಸತತವಾಗಿ ಒಂಭತ್ತು ದಿನಗಳವರೆಗೆ ಪುರಾಣ, ಉಡಿ ತುಂಬುವದು, ಪ್ರವಚನ ಸಹಿತ ಧಾರ್ಮಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ನಾಡಹಬ್ಬ ಮೈಸೂರಿನಲ್ಲಿ ಅದ್ದೂರಿಯಾಗಿ ಆಚರಣೆಯಾಗುತ್ತಿದ್ದು, ಅದೇ ಮಾದರಿಯಲ್ಲಿ ಶ್ರೀಮಠದಿಂದ ಭಕ್ತರ ನೇತೃತ್ವದಲ್ಲಿ ಆಚರಣೆ ಮಾಡಲಾಗುತ್ತಿದೆ. ಅದ್ದೂರಿ, ಸಂಭ್ರಮದ ಆಚರಣೆಗೆ ಭಕ್ತರು ಸಮ್ಮತಿ ಸೂಚಿಸಿರುವ ಹಿನ್ನೆಲೆಯಲ್ಲಿ ವೈಭವದ ನಾಡಹಬ್ಬ ದಸರಾ ಆಚರಣೆಗೆ ಸಕಲ ಸಿದ್ಧತೆಗಳನ್ನು ಆರಂಭಿಸಲಾಗುವದು ಎಂದರು.

ವೇದಿಕೆಯಲ್ಲಿ ಜಗದೆಲ್ಲಮ್ಮಾದೇವಸ್ಥಾನ ಅರ್ಚಕ ಪೂಜಾರಿ ಸಹಿತ ಹಲವರು ಉಪಸ್ಥಿತರಿದ್ದರು.

# ಆಧುನಿಕತೆಯ ಪರಿಣಾಮ ಕಲಾವಿದರು ತೆರೆಮರೆ-ಪ್ರಭುಶ್ರೀ

**ಚಿಮ್ಮಡ:** ಆದುನಿಕತೆಯ ಪರಿಣಾಮ ಇಂದು ಗ್ರಾಮೀಣ ಭಾಗಗಳಲ್ಲಿ ಮನೆಮಾತಾಗಿದ್ದ ಕಲೆ ಹಾಗೂ ಕಲಾವಿದರು ತೆರೆಮರೆಯಾಗುತಿ-ದ್ದು ಅವರಿಗೆ ಪ್ರೋತ್ಸಾಹ ನೀಡುವ ಅಗತ್ಯವಿದೆ



ಎಂದು ಚಿಮ್ಮಡ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ಶ್ರೀ ಪ್ರಭುಲಿಂಗೇಶ್ವರ ಜಾತ್ರಾ ಮಹೋತ್ಸವ, ರಥೋತ್ಸವದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಶ್ರೀ ಪ್ರಭುಲಿಂಗೇಶ್ವರ ಕಲೆ ಮತ್ತು ಸಾಂಸ್ಕೃತಿ-ಕ ನಾಟ್ಯ ಸಂಘದ ಕಲಾವಿದರ ಆಶ್ರಯದಲ್ಲಿ ಜೇವರಗಿಯ ಗುರು ಪಂಚಾಕ್ಷರಿ ಗವಾಯಿ ನಾಟ್ಯ ಸಂಘದ ಕಲಾವಿದರು ಅಭಿನಯಿಸಿದ " ಶೆರೆ ಅಂಗಡಿ ಸಂಗವ್ವ" ಎಂಬ ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು ನಾಟಕಗಳಿಗೆ ಸಂಗೀತ ಕಲಾವಿದರೇ ಜೀವಾಳವಾಗಿದ್ದು ನಾಟಕದ ಪ್ರತೀಯೊಂದು ಸನ್ನಿವೇಶಗಳಿಗೆ ತಕ್ಕಂತೆ ಸುಶ್ರಾವ್ಯವಾಗಿ ಹಾಡಿ, ಸಂಧರ್ಬಗಳಿಗನುಸಾರ ಸಂಗೀತದ ಮೂಲಕ ಮನಸನ್ನು ಮುದಗೊಳಿಸುವ ಕಲಾವಿದರ ಸಂಖ್ಯೆ ಕ್ಷೀನಿಸುತಿದ್ದು ಗ್ರಾಮೀಣ ಭಾಗಗಳಲ್ಲಿ ಮಾತ್ರ ಜೀವಂತಿಕೆ ಇರುವ ನಾಟಕ, ಕಲೆ, ಹಾಗೂ ಕಲಾವಿದರನ್ನು ಪ್ರತಿಯೊಬ್ಬರು ಪ್ರೋತ್ಸಾಹಿಸಬೇಕಾಗಿದೆ ಎಂದರು.

ಸಾನಿಧ್ಯ ವಹಿಸಿದ ರಘುನಾಥ ಪ್ರೀಯ ಸಾಧು ಮಹಾರಜರ ಮಠದ ಶ್ರೀ ಜನಾರ್ಧನ ಮಹಾರಾಜರು ಮಾತನಾಡಿ ಗ್ರಾಮೀಣ ಕಲಾವಿದರು ಸತತ ಅಭಿನಯದಿಂದಾಗಿ ವೃತ್ತಿ ರಂಗಭೂಮಿ ಕಲಾವಿದರಿಗಿಂತಲೂ ಅಚ್ಚುಕಟ್ಟುತನದ ಅಭಿನಯ ಕಲೆಯ ಜೀವಂತಿಕೆ ತೋರಿಸುತ್ತದೆ ಎಂದರು.

ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಗ್ರಾ.ಪಂ. ಮಾಜಿ ಅಧ್ಯಕ್ಷ ಶಂಕರ ಬಟಕುರ್ಕಿ, ಸಿ.ಎ. ರವೀಂದ್ರ ಕೋರೆ, ಪಿಕೆಪಿಎಸ್ ಅಧ್ಯಕ್ಷ ಚನ್ನಪ್ಪ ಬಿಳ್ಳೂರ, ನಿಂಗಣ್ಣ ಪೂಜಾರಿ, ಸಂಗಮೇಶ ಬಾಬಾಗೌಡ, ಪಾಟೀಲ, ಹಣಮಂತ ನೇಸೂರ, ಪ್ರಭು ಮುಧೋಳ, ಆನಂದ ಕವಟಿ, ಪ್ರಕಾಶ ಪಾಟೀಲ, ಶಿವಪ್ಪಾ ನಾಗನೂರ, ಮಹಾಂತೇಶ ಜಾಲಿಕಟ್ಟಿ, ಅಶೋಕ ಮೋಟಗಿ, ರಾಜು ಬಗನಾಳ, ಶೌಕತ ಮಿರ್ಜಿ ಸೇರಿದಂತೆ ಹಲವಾರು ಪ್ರಮುಖರು ಆಗಮಿಸಿದ್ದರು ಇದೇ ಸಂಧರ್ಬದಲ್ಲಿ ಹಲವು ಸಾಧಕರನ್ನು ಸತ್ಕರಿಸಿ ಗೌರವಿಸಲಾಯಿತು.

ಕಾರ್ಯಕ್ರಮಕ್ಕೆ ಅವ್ವನಪ್ಪ ಮುಗಳಖೋಡ ಸ್ವಾಗತಿಸಿದರು, ಶಿಕ್ಷಕ ಪ್ರಕಾಶ ಪೂಜೆರಿ ನಿರೂಪಿಸಿದರು.

ಕಾಳು ಬಡಿಗೇರ ವಂದಿಸಿದರು.

# ಅಖಿಲ ಕರ್ನಾಟಕ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಆದರ್ಶ ಶಿಕ್ಷಕರ ಸಮಾವೇಶ: ಸಾಧಕರಿಗೆ ಸನ್ಮಾನ ಸಮಾರಂಭ

**ಲಿಂಗಸುಗೂರು :** ತಾಲೂಕಿನ ವಿವಿದ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾಧಕರಿಗೆ ಅಖೀಲ ಕರ್ನಾಟಕ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಗಾನಕೋಗಿಲೆ ಪ್ರಶಸ್ತಿ ಧಾರವಾಡದಲ್ಲಿ ಸನ್ಮಾನಿಸಿ ಗೌರವಿಸಲಾಯಿತು ಸಾಧಕರನ್ನು ಸನ್ಮಾನಿಸಿ ಗೌರವಿಸಿದ್ದರಿಂದ ತಾಲೂಕಿನಲ್ಲಿ ಅಭಿನಂದನಾ ಕಾರ್ಯಕ್ರಮ ವನ್ನು ಹಮ್ಮಿಕೊಂಡು ನೆರವೇ-ರಿಸಿದರು.ಈ ಸಂದರ್ಭದಲ್ಲಿ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ದಲ್ಲಿ ಪ್ರಶಸ್ತಿ ಪುರಸ್ಕೃತ ರಿಗೆ ಹೃದಯಪೂರ್ವಕ ವಾಗಿ ಅಭಿನಂದೀಸಿಧರು.



ಶ್ರೀ.ಎ.ರೆಹಿಮಾನ್ ಖಾನ್ ಗಾಯಕರು ಮತ್ತು ಶ್ರೀಮತಿ ನಾಗರತ್ನಮ್ಮಾ ಹಿರೇಮಠ

ಅಖಿಲ ಕರ್ನಾಟಕ ರಾಜ್ಯಮಟ್ಟದ ಗಾನಕೋಗಿಲೆ ಪ್ರಶಸ್ತಿ ಧಾರವಾಡ ಈ ಪ್ರಶಸ್ತಿಗೆ ಆಯ್ಕೆಯಾಗಿ-ರ್ತಕ್ಕಂತ ಶ್ರೀ ಎ ರೆಹಮಾನ್ ಖಾನ್ ಹಿರಿಯ ಗಾಯಕರು ನಾರಾಯಣಪುರ ಹಾಗೂ ಶ್ರೀಮತಿ ನಾಗರತ್ನಮ್ಮ ಹಿರೇಮಠ್ ಲಿಂಗಸ್ಗೂರ ಹಾಗೂ ಒಖ ಸ್ಟುಡಿಯೋ ಮಾಲಕರು ಆದ ಮಹಿಬೂಬ್. ಕೆ ಲಿಂಗಸೂಗೂರ ಹಾಗೂ ರೇಖಾ ಎಮ್ ಗೌಡೂರು ಹಾಗೂ ವಿಠ್ಠಲ್ ಎಚ್ ಅಪ್ಪು ಬಸಾಪುರ ಹಾಗೂ ಆದಪ್ಪ ಹಲಸಂದಿ ವಡೆ ಯರಡೋಣ

ಈ ಎಲ್ಲಾ ಗಾಯಕರಿಗೆ ಹೃದಯಪೂರ್ವಕ ಧನ್ಯವಾದಗಳು ಈ ಪ್ರಶಸ್ತಿಗೆ ಕಾರಣಿಕರ್ತರಾಗಿ-ರ್ತಕ್ಕಂತ ನಾಗರಾಜ್ ತಂಬ್ರಳ್ಳಿ ವಿಠ್ಠಲ್ ಹೆಚ್ ಅಪ್ಪು ಬಸಾಪುರ ಹಾಗೂ ಮಹೆಬೂಬ್ ಕೆ ಗಾಯಕರು ಲಿಂಗಸುಗೂರು ತಾಲ್ಲೂಕಿನ ವತಿಯಿಂದ ಸನ್ಮಾನಿತರರಿಗೆ ಅಭಿನಂದಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಅಭಿಮಾನಿಗಳು ಗೆಳೆಯರು ಬಳಗದವರು ಆತ್ಮೀಯವಾಗಿ ಅಭಿನಂದನಾ ಕಾರ್ಯಕ್ರಮ ದಲ್ಲಿ ಭಾಗವಹಿಸಿದ್ದರು.

# ಬ್ರೈಟ್ ಫ್ಯೂಚರ್ ಚಾರಿಟೇಬಲ್ ಟ್ರಸ್ಟ್‌ನಿಂದ ನಿವೃತ್ತ ಹಾಗೂ ಸೇವಾ ನಿರತ ಶಿಕ್ಷಕರಿಗೆ ಸನ್ಮಾನ

**ಅಥಣಿ :** ಶಿಕ್ಷಕರ ದಿನಾಚರಣೆಯ ನಿಮಿತ್ತವಾಗಿ, ಬ್ರೈಟ್ ಫ್ಯೂಚರ್ ಚಾರಿಟೇಬಲ್ ಎಜುಕೇಷನಲ್ ಅಂಡ್ ಸೋಶಿಯಲ್ ವೆಲ್ಫೇರ್ ಟ್ರಸ್ಟ್ ವತಿಯಿಂದ ನಿವೃತ್ತ ಮತ್ತು ಸೇವಾನಿರತ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು.



ಶಿಕ್ಷಕರನ್ನು ಸನ್ಮಾನಿಸಿ ಟ್ರಸ್ಟ್‌ನ ಅಧ್ಯಕ್ಷ ಜಮೀರ್ ಮುಲ್ಲಾ ಮಾತನಾಡಿ ಕಳೆದ ಮೂರು ವರ್ಷಗಳಿಂದ ಬ್ರೈಟ್ ಫ್ಯೂಚರ್ ಟ್ರಸ್ಟ್ ಉಚಿತ ಆರೋಗ್ಯ ತಪಾಸಣಾ ಶಿಬಿರ. ಉಚಿತ ಕಣ್ಣಿನ ತಪಾಸಣಾ ಶಿಬಿರ ಸೇರಿದಂತೆ ಹಲವು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದೆ. ನಮ್ಮ ಪ್ರಯತ್ನಗಳಿಗೆ ಅಥಣಿ ನಾಗರಿಕರು ಮತ್ತು ಸಮಾಜದ ಮುಖಂಡರು ಸಹಕರಿಸಿದ್ದಾರೆ. ಮುಂದೆಯೂ ನಿಮ್ಮ ಬೆಂಬಲ ಹೀಗೆಯೇ ಇರುತ್ತದೆ ಎಂದು ಭಾವಿಸುತ್ತೇನೆ" ಎಂದು ಹೇಳಿದರು.

ನಂತರ ಮಾತನಾಡಿದ ಮೌಲಾನಾ ಮೋಸಿನ್ ಪಠಾಣ್, "ಯಾವುದೇ ಕೆಲಸ ದೊಡ್ಡದು ಅಥವಾ ಚಿಕ್ಕದು ಎನ್ನುವುದಕ್ಕಿಂತ, ಒಂದು ಒಳ್ಳೆಯ ಕೆಲಸ ಚಿಕ್ಕದಾದರೂ ಅದು ಎಲ್ಲಕ್ಕಿಂತ ಶ್ರೇಷ್ಠವಾದುದು.ಬ್ರೈಟ್ ಫ್ಯೂಚರ್ ಟ್ರಸ್ಟ್ ಈವರೆಗೆ ಸಾಕಷ್ಟು ಸಮಾಜಮುಖಿ ಕೆಲಸಗಳನ್ನು ಮಾಡಿದೆ. ಉಚಿತ ನೇತ್ರ ತಪಾಸಣೆ ಶಿಬಿರಗಳು, ಉಚಿತ ಚಿಕಿತ್ಸೆ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ಈಗ ನಿವೃತ್ತ ಮತ್ತು ಸೇವಾ ನಿರತ ಶಿಕ್ಷಕರನ್ನು ಗೌರವಿಸುವಂತಹ ಕೆಲಸವನ್ನು ಮಾಡುತ್ತಿದೆ. ಇಂತಹ ಹೆಚ್ಚಿನ ಸಾಮಾಜಿಕ ಕಾರ್ಯಗಳನ್ನು ಮಾಡುವ ಶಕ್ತಿ ದೇವರು ಅವರಿಗೆ ನೀಡಲಿ" ಎಂದು ಹಾರೈಸಿದರು.

ಈ ವೇಳೆ ಮುಫ್ತಿ ಜಾವೇದ್, ಗುಲಾಬ್ ಮೋಮಿನ್, ಹಬಿಬುರ್ರಹಮಾನ್ ನದಾಫ್, ಅಫ್ಜಲ್‌ಖಾನ್ ದೇಸಾಯಿ, ಯೂನುಸ್ ಕೋರ್ಬು, ಕಲೀಮ್ ಜಾಗೀರದಾರ್, ಮೊಹಮ್ಮದ್ ನೋಮಾನ್ ಮೋಳೆ, ಅಸ್ಗರ್ ಅತ್ತಾರ್, ಮೊಹಮ್ಮದ್ ಇಲಿಯಾಸ್ ಖಲೀಫಾ, ಹುಜೇಫಾ ನದಾಫ್, ಅಬ್ದುಲ್ ರಹೀಮ್ ಸತಾರಮೇಕರ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ವ್ಯಕ್ತಿಯ ಬುದ್ದಿಗೆ ಕೊಟ್ಟ ಶಿಕ್ಷಣಕ್ಕಿಂತ ಹೃದಯಕ್ಕೆ ಕೊಟ್ಟ ಶಿಕ್ಷಣ ಶ್ರೇಷ್ಠ-ಪತ್ರಕರ್ತ ಬಸವರಾಜ್ ಉಳ್ಳಾಗಡ್ಡಿ



**ಬಾದಾಮಿ :** ವ್ಯಕ್ತಿಯ ಬುದ್ದಿಗೆ ಕೊಟ್ಟ ಶಿಕ್ಷಣಕ್ಕಿಂತ ಹೃದಯಕ್ಕೆ ಕೊಟ್ಟ ಶಿಕ್ಷಣ ಶ್ರೇಷ್ಠವಾದುದು, ಪ್ರತಿಭೆ ಇದ್ದರೆ ಯಾವುದೇ ಜಾತಿ ಧರ್ಮ ಅಗತ್ಯವಿಲ್ಲ ಅದು ಎಲ್ಲ ಕಡೆಗಳಲ್ಲೂ ಮಾನ್ಯವಾಗುತ್ತದೆ, ನೀನು ಒಳ್ಳೆಯ ಕೆಲಸ ಮಾಡಿದರೆ ಜಗತ್ತೆ ನಿನಗೆ ಶರಣಾಗುತ್ತದೆ ಎಂದು ಪತ್ರಕರ್ತರು, ಶ್ರೀಗುರುಕುಲ ತರಬೇತಿಯ ತರಬೇತುದಾರ ಬಸವರಾಜ್ ಉಳ್ಳಾಗಡ್ಡಿ ವಿದ್ಯಾರ್ಥಿಗಳಿಗೆ ಹೇಳಿದರು

ಅವರು ನಗರದ ಕಿತ್ತೂರ ಚನ್ನಮ್ಮ ಪ್ರಾಥಮಿಕ ಶಾಲೆಯ ಸಂಯುಕ್ತಾಶ್ರಯದ ಶ್ರೀಗುರುಕುಲ ನವೋದಯ ತರಬೇತಿ ಕೇಂದ್ರದಲ್ಲಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ನಿವೃತ್ ಗಣಿತ ಶಿಕ್ಷಕ ಎಸ್.ಎಸ್.ತಮ್ಮನ್ನವರ ಮಾತನಾಡಿ ವಿದ್ಯಾರ್ಥಿಗಳು ಬಂಗಾರವಿದ್ದಂತೆ ನೀವು ಬಂಗಾರದಂತ ಜೀವನ ನಡೆಸಲು ಉತ್ತಮವಾದ ಶಿಕ್ಷಣ ಪಡೆದು ಉನ್ನತ ಸ್ಥಾನಕ್ಕೇರಿ ದೇಶಕ್ಕೆ ನಾಡಿಗೆ ಜೊತೆಗೆ ಹೆತ್ತವರಿಗೆ ಕಲಿಸಿದ ಸಂಸ್ಥೆಗೆ ಹೆಸರು ತರಬೇಕೆಂದರು.

ತರಬೇತಿದಾರರಾದ ಪ್ರತಿಭಾ ಮಾನಕವಾಡ, ಶಂಕ್ರಮ್ಮ ಗಡ್ಡಿ, ನಿವೇದಿತಾ ಉಳ್ಳಾಗಡ್ಡಿ ಹಿಂದಿನ ಗುರುಕುಲ ಪದ್ದತಿಯಿಂದ ಹಿಡಿದು ಇಂದಿನ ಆಧುನಿಕ ಕಾಲದವರೆಗೂ ವಿದ್ಯಾರ್ಥಿಗಳ ಶ್ರೇಯೋಭಿವೃದ್ದಿಗೆ ಶಿಕ್ಷಕರು ಶ್ರಮಿಸುತ್ತಿದ್ದು ಶ್ಲಾಘನೀಯ ಕಾರ್ಯವಾಗಿದೆ ಎಂದರು, ವಿದ್ಯಾರ್ಥಿಗಳು ಅಲಂಕಾರ ಮಾಡಿ ಶಿಕ್ಷಕರಿಗೆ ಹೂಮಳೆಗರೆದು ಕೇಕ್ ತಿನ್ನಿಸಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಿ ಶಿಕ್ಷಕರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿದ್ದರು.

# ಕಾಯಿಪಲ್ಲೆ ಮಾರುಕಟ್ಟೆಯಲ್ಲಿ ನಿಗದಿತ ದರದಂತೆ ಸುಂಕ ವಸೂಲಿ ಮಾಡಿಪಟ್ಟಣ ಪ್ರವೇಶಿಸುವ ನಾಲ್ಕು ರಸ್ತೆಗಳಲ್ಲಿ ಸ್ವಾಗತ ಕಮಾನುಗಳ ಶೀಘ್ರ ನಿರ್ಮಾಣ: ದತ್ತಾ ವಾಸ್ಟರ್

**ಅಥಣಿ :** ಪಟ್ಟಣದ ಎಲ್ಲ 27 ವಾರ್ಡಗಳ ಸದಸ್ಯರ ಸಣ್ಣ ಪುಟ್ಟ ಸಮಸ್ಯೆಗಳನ್ನು ಬಗೆ ಹರಿಸಿ ಜನಪರ ಹಾಗೂ ಅಭಿವೃದ್ಧಿ ಪರ ಯೋಜನೆಗಳನ್ನು ಅನುಷ್ಠಾನ ಗೊಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುವೆ. ಪಟ್ಟಣದ ಅಭಿವೃದ್ಧಿ ವಿಚಾರದಲ್ಲಿ ನಾವೆಲ್ಲರು ಒಂದೇ, ಮಾಜಿ ಉಪಮುಖ್ಯಮಂತ್ರಿ ಶಾಸಕ ಲಕ್ಷ್ಮಣ ಸವದಿ ಮಾರ್ಗದರ್ಶನದಲ್ಲಿ ಪಟ್ಟಣ ಸಂಪರ್ಕಿಸುವ ನಾಲ್ಕು ಹೆದ್ದಾರಿಗಳಲ್ಲಿ ಸ್ವಾಗತ ಕಮಾನು ನಿರ್ಮಿಸುವ ಕಾರ್ಯ ಅತೀ ಶೀಘ್ರದಲ್ಲಿಯೇ ಪ್ರಾರಂಭಿಸುತ್ತೇವೆ ಎಂದು ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ ಹೇಳಿದರು



ಪಟ್ಟಣದ ಪುರಸಭೆಯ ಸಭಾಭವನದಲ್ಲಿ ನಡೆದ ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ ನೇತೃತ್ವದಲ್ಲಿ ನಡೆದ ಪ್ರಥಮ ಸಭೆಯಲ್ಲಿ ಮಾತನಾಡುತ್ತಿದ್ದರು. ಅಥಣಿ ಪಟ್ಟಣಕ್ಕೆ ಆಗಮಿಸುವ ಮುಖ್ಯ ರಸ್ತೆಗಳಿಗೆ ಸ್ವಾಗತ ಕಮಾನುಗಳನ್ನು ನಿರ್ಮಿಸಿ " ಶಿವಯೋಗಿಗಳ ನಾಡಿಗೆ ಸ್ವಾಗತ ಅನ್ನುವ ಫಲಕಗಳನ್ನು ಅಳವಡಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಸಿದರು ಅಲ್ಲದೆ ಕಾಯಿಪಲ್ಲೆ ಮಾರುಕಟ್ಟೆಯಲ್ಲಿ ಮಾರಾಟಗಾರರಿಂದ ಹೆಚ್ಚುವರಿ ತೆರಿಗೆ ವಸೂಲಿ ಮಾಡುವುದನ್ನು ತಪ್ಪಿಸಲು ದರ ಪಟ್ಟಿಯುಳ್ಳ ಫಲಕಗಳನ್ನು ಅಳವಡಿಸಿದ್ದು, ಮಾರಾಟಗಾರರು ಬೋರ್ಡಗಳಲ್ಲಿ ನಿಗದಿಯಾಗಿರುವ ದರದಂತೆ ಸುಂಕದ ಹಣ ಪಾವತಿಸಬೇಕು ಎಂದು ಮಾರಾಟಗಾರರಿಗೆ ತಿಳಿಸಿದ ಅವರು ಸುಂಕ ವಸೂಲಿ ಗುತ್ತಿಗೆದಾರ ಹಾಗೂ ಸಂಕ ವಸೂಲಿಗಾರರು ಮಾರಾಟಗಾರರಿಂದ ಹೆಚ್ಚು ಹಣ ವಸೂಲಿ ಮಾಡಿದಂತೆ ಖಡಕ ಎಚ್ಚರಿಕೆಯನ್ನು ನೀಡಿದರು. ಬೀದಿನಾಯಿಗಳ ನಿಯಂತ್ರಣಕ್ಕೆ ಕಠಿಣ ಕ್ರಮ ಜರುಗಿಸುವ ಕುರಿತು ಚರ್ಚೆ ನಡೆಸಿ ಶೀಘ್ರ ಒಂದು ವಾರದ ಒಳಗಾಗಿ ಕ್ರಮ ಜರುಗಿಸುವಂತೆ ಅಧ್ಯಕ್ಷ ದತ್ತಾ ವಾಸ್ಟರ ಅಧಿಕಾರಿಗಳಿಗೆ ಸೂಚಿಸಿದರು. ಪಟ್ಟಣದ ಅಭಿವೃದ್ಧಿ ವಿಷಯದಲ್ಲಿ ಎಲ್ಲಾ 27 ವಾರ್ಡುಗಳ ಸದಸ್ಯರು ಒಂದೇ ಅಭಿವೃದ್ಧಿ ವಿಷಯದಲ್ಲಿ ತಾರತಮ್ಯ ಬೇಡ ಜನಪರ ಹಾಗೂ ಅಭಿವೃದ್ಧಿ ಪರ ಯೋಜನೆಗಳನ್ನು ಅನುಷ್ಠಾನ ಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸೋಣ ನಾವೆಲ್ಲರು ಒಂದಾಗಿರೋಣ ಎಂದು ಹೇಳಿದರು

ಪುರಸಭೆ ಸದಸ್ಯ ರಾಜಶೇಖರ ಗುಡೊಡಗಿ ಮಾತನಾಡಿ ಪಟ್ಟಣದ ವ್ಯಾಪ್ತಿಯಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದ್ದು, ಆಯ ಕಟ್ಟಿನ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಬೇಕು. ಸೊಳ್ಳೆಗಳ ನಿಯಂತ್ರಣಕ್ಕಾಗಿ ಫಾಗಿಂಗ್ ಮಷಿನ್ ಮೂಲಕ ಹೊಗೆಯನ್ನು ಹೊಡೆಯಬೇಕು ಎಂದು ಸದಸ್ಯರು ಹೇಳಿದರು. ಪುರಸಭೆ ಸದಸ್ಯ ರಾವಸಾಹೇಬ ಐಹೊಳೆ ನಿಮ್ಮ ಅಧ್ಯಕ್ಷ ಅವಧಿಯಲ್ಲಿ ಪಟ್ಟಣದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ಅನುಷ್ಠಾನಗೊಳ್ಳಲಿ 11ನೇ ವಾರ್ಡನ ರಸ್ತೆಗಳಲ್ಲಿ ತಗ್ಗು ಬಿದ್ದ ಪರಿಣಾಮ ಸಾರ್ವಜನಿಕರಿಗೆ ಸಾಕಷ್ಟು ಅನಾನಕೂಲವಾಗಿದ್ದು,ಮುರುಮ ಹಾಕುವ ಕಾರ್ಯ ಮಾಡಬೇಕು. ಬೀದಿ ದೀಪಗಳ ಕಂಬಗಳು ಕೆಳ ಮಟ್ಟದಲ್ಲಿದ್ದು ಅವುಗಳನ್ನು ಬದಲಾವಣೆಗೆ ಕ್ರಮ ಜರುಗಿಸಬೇಕು, ಕನಕ ನಗರದಲ್ಲಿ ಇರುವ ಗಾರ್ಡನ್ ಒಂದರಲ್ಲಿ ತುಂಬಾ ಗಲಿಜು ಆಗಿದೆ ಆದಷ್ಟು ಬೇಗ ಆ ಜಾಗದಲ್ಲಿ ಮುರುಮ ಹಾಕಬೇಕು ಎಂದು ಮನವಿ ಮಾಡಿದರು.

ಪುರಸಭೆ ಸದಸ್ಯ ವಿಲೀನರಾಜ ಯಳಮಲ್ಲೆ ಮಾತನಾಡಿ, ಪಟ್ಟಣದಲ್ಲಿ ಹಂದಿ, ಬೀದಿ ನಾಯಿಗಳ ಸಂಖ್ಯೆ ಹೆಚ್ಚಾದ ಪರಿಣಾಮ ಸಾರ್ವಜನಿಕರಿಗೆ ಅತೀ ತೊಂದರೆಯಾಗಿತ್ತಿದ್ದು, ತಕ್ಷಣ ಅವುಗಳ ನಿಯಂತ್ರಣಕ್ಕೆ ಕ್ರಮ ಜರುಗಿಸಬೇಕು ಎಂದು ಹೇಳಿದರು.

13ನೇ ವಾರ್ಡ ಸದಸ್ಯ ಮಲ್ಲೇಶ ಹುದ್ದಾರ ಮಾತನಾಡಿ, ಪಟ್ಟಣದ ಎಲ್ಲ 27 ವಾರ್ಡಗಳಲ್ಲಿನ 10 ರಿಂದ 15 ಸಾವಿರ ವರೆಗಿನ ಸಣ್ಣ ಪುಟ್ಟ ಕಾಮಗಾರಿಗಳಿಗೆ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಸದಸ್ಯರಾದ ಕಲ್ಲೇಶ್ ಮಡ್ಡಿ. ಸಂತೋಷ ಸಾವಡಕರ. ಸೈಯ್ಯದಅಮೀನ್ ಗದ್ಯಾಳ, ಪ್ರಮೋದ ಬಿಳ್ಳೂರ, ಉದಯ ಸೋಳಸಿ, ರಿಯಾಜ ಸನದಿ, ಮಲ್ಲಿಕಾರ್ಜುನ ಬುಟಾಳಿ, ಬಸವರಾಜ ಪಾಟೀಲ, ಮುಖಂಡರಾದ ದಿಲೀಪ ಲೋಣಾರೆ, ಮುಖಂಡರಾದ ತಿಪ್ಪಣ್ಣ ಭಜಂತ್ರಿ, ರವಿ ಬಡಕಂಬಿ. ಬಾಬು ಖೇಮಲಾಪುರ, ಅಶೀಫ್ ತಾಬೋಳಿ. ವೆಂಕಟೇಶ್ ದೇಶಪಾಂಡೆ. ಬಸವರಾಜ ಹಳ್ಳದಮಳ, ಬೀರಪ್ಪಯಕ್ಕಂಚಿ, ಸೇರಿದಂತೆ ವ್ಯವಸ್ಥಾಪಕಿ ದಯಾ ಜೋಶಿ, ಕಂದಾಯ ವಿಭಾಗದ ಸಿದ್ದು ಮಾಂಗ, ಸಿಬ್ಬಂದಿ ರಾಜು ವಾಳವೇಕರ, ರವೀಂದ್ರ ಸನಗೊಂಡ ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಕರದು ಮಹತ್ವದ ಪಾತ್ರ

**ಬಾಗಲಕೋಟ :** ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಮತ್ತು ಅವರ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಕರು ಮಹತ್ವದ ಪಾತ್ರವನ್ನು ವಹಿಸುತ್ತಾರೆ ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು.




ಇಲ್ಲಿನ ವಿದ್ಯಾ ಪ್ರಸಾರಕ ಮಂಡಳದ ಎಸ್. ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಆಯ್‌ಕ್ಯೂಎಸಿ ಮತ್ತು ಎನ್‌ಎಸ್‌ಎಸ್ ಘಟಕಗಳ ಆಶ್ರಯದಲ್ಲಿ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ 'ಶಿಕ್ಷಕರ ದಿನಾಚರಣೆ' ಕಾರ್ಯಕ್ರಮದಲ್ಲಿಅವರುಮಾತನಾಡಿದರು.

ಪಾಲಕರ ನಂತರ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುವ ಶಿಕ್ಷಕನಿಗೆ ಅವರನ್ನು ಸಮಾಜದ ಆಸ್ತಿಯನ್ನಾಗಿ ಪರಿವರ್ತಿಸುವ ಶಕ್ತಿಯಿದೆ. ಅವರ ಗುರಿ ಸಾಧನೆಗೆ ಸರಿಯಾದ ದಾರಿಯನ್ನೂ ತೋರಿಸಿ ಅವರ ವಿಕಾಸಕ್ಕೆ ಪ್ರಯತ್ನ ಪಡುತ್ತಾನೆ ಎಂದರು.

ತಮ್ಮ ಉತ್ತಮ ಬೋಧನೆ,ನಡೆ-ನುಡಿ ಮತ್ತು ವ್ಯಕ್ತಿತ್ವದಿಂದ ವಿದ್ಯಾರ್ಥಿಗಳ ಮೇಲೆ ಶಿಕ್ಷಕರು ಪ್ರಭಾವ ಬೀರಬೇಕು. ಹಲವು ಮೂಲಗಳಿಂದ ಜ್ಞಾನವನ್ನು ಸಂಗ್ರಹಿಸಿ ಅದನ್ನು ವಿದ್ಯಾರ್ಥಿಗಳಿಗೆ ನೀಡಬೇಕು. ಪಠ್ಯ ಬೋಧನೆ ಜೊತೆಗೆ ಬದುಕಿನ ಪಾಠವನ್ನೂ ಕಲಿಸಬೇಕು. ಬದಲಾದ ಸನ್ನಿವೇಶದಲ್ಲಿ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಿಗೆ ಸಂಸ್ಕಾರವನ್ನು ನೀಡುವ, ಜೀವನ ಹಾಗೂ ನೈತಿಕ ಮೌಲ್ಯಗಳನ್ನು ಬೆಳೆಸುವ ಅವಶ್ಯಕತೆಯಿದೆ ಎಂದರು.

ಡಾ.ಸರ್ವಪಲ್ಲಿ ರಾಧಾಕೃಷ್ಣನ್‌ರ ಬದುಕು ಇಡೀ ಮನುಕುಲಕ್ಕೆನೇ ದಾ-ರಿದೀಪವಾಗಿದೆ. ಅವರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವ ಸಂಕಲ್ಪವನ್ನು ಮಾಡಿ ಅವರು ವ್ಯಕ್ತಿತ್ವವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಬೇಕಿದೆ. ಆತ್ಮಾವಲೋಕನ ಮಾಡಿಕೊಂಡು ಮುಂದೆ ಸಾಗಿದಾಗ ಮಾತ್ರ ಇಂತಹ ದಿನಾಚರಣೆಗಳು ಅರ್ಥ-ಪೂರ್ಣವಾಗಬಲ್ಲವು ಎಂದರು.

ವಿದ್ಯಾರ್ಥಿಗಳಾದ ಎಸ್.ಎಂ.ಜಲಗೇ-ರಿ, ಎಸ್. ಟಿ. ನಿಂಬಲಗುಂದಿ, ಪಿ. ಎಸ್.ಸಂಗಮದ,ಎಸ್.ಬಿ.ಲಮಾಣಿ, ಎಸ್.ಎಸ್.ಬಾಸುತ್ಕರ, ಕೆ.ಜಿ.ಲಮಾಣಿ ಮತ್ತುಮಂಜುಳಾಗೌಡರಮಾತನಾಡಿದರು. ಸಹನಾ ನರೇಗಲ್ ಹಾಗೂ ಸರಸ್ವತಿ ತಳವಾರ ಪ್ರಾರ್ಥಿಸಿದರು. ವಾಯ್. ವಾಯ್.ಕವಡಿಮಟ್ಟಿ ಸ್ವಾಗತಿಸಿದರು. ಎನ್. ಎಸ್.ಪೂಜಾರ ವಂದಿಸಿದರು. ಜ್ಯೋತಿ ಬಿಳಿಜಾಡರ ನಿರೂಪಿಸಿದರು. ಡಾ.ಎಸ್. ಎಸ್.ಹಂಗರಗಿ, ಎನ್‌ಎಸ್‌ಎಸ್ ಅಧಿಕಾ-ರಿಗಳಾದ ಎಸ್ ವಾಯ್ ಬೊಮ್ಮಣ್ಣವರ, ಎಸ್.ಎಂ ಹಡಪದ ಮತ್ತು ಶಿಕ್ಷಕರು ಪಾಲ್ಗೊಂಡರು.

# ನಾರಾಯಣ ಗುರುಗಳ ವಿಶ್ವಪ್ರಜ್ಞೆಯ ತತ್ವಗಳು ಇಂದಿನ ಬದುಕಿಗೆ ಮಾರ್ಗದರ್ಶಿ: ಸಂತೋಷ ಬಂಡೆ



**ವಿಜಯಪುರ:**ಜಾತಿ–ಪೀಡಿತಸಮಾಜದಲ್ಲಿಸಾಮಾಜಿಕ ಸಮಾನತೆ ಮತ್ತು ಆಧ್ಯಾತ್ಮಿಕ ಜ್ಞಾನೋದಯವನ್ನು ಉತ್ತೇಜಿಸಿದ ಸುಧಾರಣಾ ಚಳವಳಿಯ ಹರಿಕಾರ ಬ್ರಹ್ಮರ್ಷಿ ನಾರಾಯಣ ಗುರುಗಳ ತತ್ವಾದರ್ಶಗಳು ಇಂದಿಗೂ ಪ್ರಸ್ತುತ ಎಂದು ಶಿಕ್ಷಕ ಸಾಹಿತಿ ಸಂತೋಷ ಬಂಡೆ ಹೇಳಿದರು.

ರವಿವಾರ ತಾಲೂಕಿನ ನಾಗಠಾಣ ಗ್ರಾಮದ ಅರಿವು ಕೇಂದ್ರದಲ್ಲಿ ಹಮ್ಮಿಕೊಂಡ "ಬ್ರಹ್ಮರ್ಷಿ ನಾರಾಯಣ ಗುರುಗಳ 171 ನೇ ಜಯಂತಿ" ಆಚರಣೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಹೋರಾಟಮಯ ಜೀವನದಿಂದ ಸಮ ಸಮಾಜದ ರೂವಾರಿಗಳಾಗಿ ಜನಮಾನಸದಲ್ಲಿ ಸಮಾನತೆಯ, ಸರ್ವೋದಯದ,ಭ್ರಾತೃತ್ವದ ಮತ್ತು ಮಾನವೈಕ್ಯತೆಯ ಬೀಜಗಳನ್ನು ಬಿತ್ತಿದ ನಾರಾಯಣ ಗುರುಗಳ ವಿಶ್ವಪ್ರಜ್ಞೆ ಮತ್ತು ಮನುಷ್ಯ ಧರ್ಮದ ತತ್ವಗಳು ಇಂದಿನ ಬದುಕಿಗೆ ಮಾರ್ಗದರ್ಶಿಯಾಗಿವೆ ಎಂದು ಹೇಳಿದರು.

ಗ್ರಂಥಪಾಲಕ ಮಂಜುನಾಥ ಗಂಗನಳ್ಳಿ ಮಾತನಾಡಿ, ನಾರಾಯಣ ಗುರುಗಳು "ಒಂದು ಜಾತಿ, ಒಂದು ಧರ್ಮ, ಎಲ್ಲ ಮಾನವರಿಗೆ ಒಂದೇ ದೇವರು" ಎಂಬ ತತ್ವದ ಮೂಲಕ ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿ, ಹಿಂದುಳಿದ ಸಮುದಾಯದ ಏಳಿಗೆಗೆ ಶಿಕ್ಷಣ ಅತ್ಯಗತ್ಯ ಎಂದು ಸಾರಿದರು. ಅವರ ತ್ರಿಭಾಷಾ ನೀತಿಯು ರಾಷ್ಟ್ರೀಯ ಶಿಕ್ಷಣ ನೀತಿಯ ಕಲ್ಪನೆಗೆ ಅಡಿಪಾಯ ಹಾಕಿದೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಸದಸ್ಯ ಸಿದ್ರಾಮ ಹೊಸಟ್ಟಿ, ಗ್ರಾಮಸ್ಥರಾದ ಸುರೇಶ ಕತ್ನಳ್ಳಿ, ಜಟಿಂಗರಾಯ ಕಕ್ಕೇರಗೊಳ, ಬಸವರಾಜ ಸಾರವಾಡ, ಅಜೀತ ದೇವಕರಸೇರಿದಂತೆಅನೇಕಮಕ್ಕಳುಭಾಗವಹಿಸಿದ್ದರು.

# ಜಾನಪದ ಎಂದಿಗೂ ಬತ್ತದ ಸಾಹಿತ್ಯ: ಡಾ. ಸಂಗಮೇಶ ಮೇತ್ರಿ



**ವಿಜಯಪುರ** : ಜಾನಪದ ಸಾಹಿತ್ಯವು ಸಂಸ್ಕೃತಿಯ ಮೂಲ ಬೇರು. ತಲೆ ತಲಾಂತರದಿಂದ ಬಂದಿರುವ ಜೀವನದ ಪಾಠಗಳನ್ನು,ಮೌಲ್ಯಗಳನ್ನುನಮಗೆನೀಡಿದ ಶ್ರೇಷ್ಠ ಸಾಹಿತ್ಯವಾಗಿ ಹೊರಹೊಮ್ಮಿರುವ ಸಾಹಿತ್ಯವೆಂದರೆ ಅದು ಜನಪದ ಸಾಹಿತ್ಯ. ಈ ಸಾಹಿತ್ಯನಮ್ಮಸಂಸ್ಕೃತಿಯಸೂಕ್ಷ್ಮತೆಗಳನ್ನು ಎಚ್ಚರಿಸುವುದು ಮತ್ತು ಮೌಖಿಕ ಪರಂಪರೆಯನ್ನು ಮುಂದಿನ ತಲೆಮಾರಿಗೆ ಒಯ್ಯುವ ಮೂಲಕ ಜಾನಪದ ಸಾಹಿತ್ಯದ ಅಗತ್ಯತೆ ಇಂದಿಗೂ ಕೂಡಾ ಪ್ರಸ್ತುತವಾಗಿದೆ. ಹಾಗಾಗಿಯೇ ಅದು ಎಂದಿಗೂ ಬತ್ತದ ಸಾಹಿತ್ಯವಾಗಿ ಹೊರಹೊಮ್ಮಿದೆ ಎಂದು ಹಿರಿಯ ಸಾಹಿತಿ ಡಾ. ಸಂಗಮೇಶ ಮೇತ್ರಿ ಅಭಿಪ್ರಾಯಪಟ್ಟರು.

ರವಿವಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಜರುಗಿದ ಸಾ. ಮ. ಹುಂಡೇಕಾರಹಾಗೂಮ.ಮ.ಹುಂಡೇಕಾರ ಅವರ ಸ್ಮರಣೆಯಲ್ಲಿ ಜರುಗಿದ ಜಾನಪದ ಸಾಹಿತ್ಯದ ವಿಶೇಷ ಚಿಂತನಾಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಆಧು–ನಿಕ ಪ್ರಪಂಚದಲ್ಲಿ ಕಣ್ಮರೆಯಾಗುತ್ತಿರುವ ಈ ಜಾನಪದ ಸಾಹಿತ್ಯವನ್ನು ಸಂರಕ್ಷಿಸಲು ಮತ್ತು ಸಂಸ್ಕೃತಿಯನ್ನು ಮರುಸ್ಥಾಪಿಸಲು ಅದರ ಆಳವಾದ ಅಧ್ಯಯನ ಇಂದು ಅತ್ಯಗತ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಸವನ ಬಾಗೇವಾಡಿ ತಾಲೂಕಾ ಸರಕಾರಿ ನೌಕರರ ಸಂಘದ ಅಧ್ಯಕ್ಷ ಶಿವಾನಂದ ಮಂಗಾನವರ ಮಾತನಾಡಿದರು.

ಜಾನಪದ ಸಾಹಿತ್ಯದ ಪ್ರಸ್ತುತ ಅಗತ್ಯತೆ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ವಿಜಯಪುರ ನಗರ ಘಟಕದ ಕಸಾಪ ಅಧ್ಯಕ್ಷ ಜಗದೀಶ ಬೋಳಸೂರ ಮಾತನಾಡಿ, ಜಾನಪದ ಸಾಹಿತ್ಯ ಇಂದು ನಮ್ಮೆಲ್ಲರ ನರನಾಡಿಗಳಲ್ಲಿ ರಕ್ತಗತವಾಗಿ ನಿಂತಿದೆ. ವೈಚಾರಿಕತೆ ಹಾಗೂ ವೈಜ್ಞಾನಿಕತೆಗಳ ಮೂಲಕ ಜಾನಪದ ಸಾಹಿತ್ಯ ಗಾದೆ, ಒಗಟುಗಳ ಮೂಲಕ, ನಾಣ್ನುಡಿಗಳ ಮೂಲಕ ಶ್ರೀಮಂತವಾದ ಹಿತವಚನಗಳನ್ನು ತನ್ನೊಡಲೊಳಗೆ ಹಿಡಿದಿಟ್ಟುಕೊಂಡ ಈ ಸಾಹಿತ್ಯಕ್ಕೆ ಎಂದಿಗೂ ಸಹ ಸಾವಿಲ್ಲ ಎಂದರು.

ಜಾನಪದ ಸಾಹಿತ್ಯದಲ್ಲಿ ಗರತಿಯ ಜೀವನ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ಸಾಹಿತಿ ಕವಿತಾ ಕಲ್ಯಾಣಪ್ಪಗೋಳ ಮಾತನಾಡಿ, ಜನವಾಣಿ ಬೇರು, ಕವಿವಾಣಿ ಹೂವು ಎಂಬುದನ್ನು ಮೆಲುಕು ಹಾಕುತ್ತ, ಆಸರಿಕೆ, ಬೇಸರಿಕೆಗಳನ್ನು ಮರೆಯಲು ಪ್ರೇರಕವಾದ ಸಾಹಿತ್ಯವಾಗಿಹೊರಹೊಮ್ಮಿದೆ ಎಂದರು. ಹೆಣ್ಣು ಮಗಳಾಗಿ, ತಾಯಿಯಾಗಿ, ಸೊಸೆಯಾಗಿ, ಅತ್ತೆಯಾಗಿ ಗರತಿಯ ಮಹತ್ವವನ್ನು ಅತ್ಯಂತ ಮಾರ್ಮಿಕವಾಗಿ ತಿಳಿಸಿಕೊಟ್ಟರು.

ಇದೇ ಸಂದರ್ಭದಲ್ಲಿ ವಿಜಯ ಹುಂಡೇಕಾರ, ಸುನೀಲ ಒಣರೊಟ್ಟಿ, ಮಲೀಕ ಮಮದಾಪೂರ, ವಿಜಯಲಕ್ಷ್ಮಿ ಹಳಕಟ್ಟಿ ಅವರು ಮಾತನಾಡಿದರು. ಕಸಾಪ ಗೌರವ ಕಾರ್ಯದರ್ಶಿ ಡಾ. ಮಾಧವ ಗುಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಯಶ್ರೀ ಹಿರೇಮಠ ಸ್ವಾಗತಿಸಿದರು. ಶಿಲ್ಪಾ ಭಸ್ಮೆ ನಿರೂಪಿಸಿದರು. ಪರವೀನ ಶೇಖ ವಂದಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ಡಾ. ಆನಂದ ಕುಲಕರ್ಣಿ, ಮಹ್ಮದಗೌಸ ಹವಾಲ್ದಾರ, ಅಭಿಷೇಕ ಚಕ್ರವರ್ತಿ, ಬಿ. ಎಂ. ಅಜೂರ, ಅರ್ಜುನ ಶಿರೂರ, ಜಿ. ಎಸ್ ಬಳ್ಳೂರ, ಶ್ರೀಕಾಂತ ನಾಡಗೌಡ, ಸಿದ್ರಾಮಪ್ಪ ಜಂಗಮಶೆಟ್ಟಿ, ಸಿದ್ದು ಮಾನೆ, ಎ.ಎಂ ಹಳ್ಳೂರ, ಎಂ.ಬಿ. ಮಾಶೆಟ್ಟಿ, ಸಿದ್ದನಗೌಡ ಪಾಟೀಲ, ಎ.ವಿ ಜಹಾಗೀರದಾರ, ಎಸ್. ಆರ್. ಬೀಳಗಿ, ಶಿವಾಜಿ ಮೋರೆ, ಮಲ್ಲಿಕಾರ್ಜುನ ಕೆಳಗಡೆ, ಲತಾ ಗುಂಡಿ, ಗಂಗಮ್ಮ ರಡ್ಡಿ, ಸುಖದೇವಿ ಅಲಬಾಳಮಠ, ರೇವತಿ ಬೂದಿಹಾಳ, ಶಾಂತಾ ವಿಭೂತಿ, ತೇಜಸ್ವಿನಿ ವಾಂಗಿ, ಶೋಭಾ ಹರಿಜನ ಮುಂತಾದವರು ಉಪಸ್ಥಿತರಿದ್ದರು.

# ಶಿಕ್ಷಕ ವೃತ್ತಿ ಬಲು ಶ್ರೇಷ್ಠ: ಜುಗತಿ




**ವಿಜಯಪುರ:**ಶಿಕ್ಷಕರವೃತ್ತಿಅತ್ಯಂತಶ್ರೇಷ್ಠವಾದದ್ದು. ಜಗತ್ತಿನಲ್ಲಿಯೇ ಪೂಜ್ಯನೀಯ ಸ್ಥಾನದಲ್ಲಿರುವ ವೃತ್ತಿ ಅದು ಶಿಕ್ಷಕರ ವೃತ್ತಿ. ಮಕ್ಕಳಲ್ಲಿ ಶಿಕ್ಷಕರು ನಿರಂತರವಾಗಿ ಪಠ್ಯದ ಜೊತೆಗೆ ಮಾನವೀಯ ಮೌಲ್ಯಗಳನ್ನು ಬಿತ್ತಬೇಕು ಎಂದು ಚೇತನಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ರಾಜಶ್ರೀ ಜುಗತಿ ಹೇಳಿದರು.

ನಗರದ ಚೇತನಾ ಆಂಗ್ಲ ಮಾಧ್ಯಮ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯಶಿಕ್ಷಕಸಾಹಿತಿಪೊ?ರ,ಎ.ಎಚ್.ಕೊಳಮಲಿ ಮಾತನಾಡಿ, ತಮ್ಮ ಶಾಲೆಯ ಮಕ್ಕಳನ್ನು ಸ್ವಂತ ತಮ್ಮ ಮಕ್ಕಳ ಹಾಗೆ ಕಾಳಜಿಯಿಂದ ನೋಡುವವರೇ ಆದರ್ಶ ಶಿಕ್ಷಕರು. ಮಗುವಿನ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ ಎಂದು ಹೇಳಿದರು.

ಉಪಾಧ್ಯಕ್ಷ ರೋಹಿತ ಜುಗತಿ, ನಿರ್ದೇಶಕ ಡಾ, ನಾಗರಾಜ ಹೇರಲಗಿ, ಸಹಾಯಕ ಆಡಳಿತ ಅಧಿಕಾರಿ ಪ್ರಮೋದ ಕುಲಕರ್ಣಿ, ಸಿ.ಎಸ್. ವಾಲಿ, ಸಾಗರ ಕುಲಕರ್ಣಿ ಸೇರಿದಂತೆ ಶಾಲಾ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಅನೇಕ ವಿದ್ಯಾರ್ಥಿಗಳು ಶಿಕ್ಷಕರ ದಿನಾಚರಣೆಯ ಮಹತ್ವ ಕುರಿತು ಮಾತನಾಡಿದರು. ಕುಮಾರಿ ಲಕ್ಷ್ಮಿ ಹೊಸಮನಿ ಸ್ವಾಗತಿಸಿ, ನಿರೂಪಿಸಿದರು.

# ಸಮಾಜ ಸುಧಾರಣೆಗಾಗಿ ನಾರಾಯಣ ಗುರುಗಳ ಸೇವೆ ಅನನ್ಯ: ಸೋಮಲಿಂಗ ಗೆಣ್ಣೂರ




**ವಿಜಯಪುರ** : ಅಂದಿನ ಸಮಾಜದಲ್ಲಿನ ಮೂಢನಂಬಿಕೆ ಹಾಗೂ ಮೌಢ್ಯತೆ, ಅಸಮಾನತೆ ನಿವಾರಿಸುವ ಮೂಲಕ ಸಮಾಜ ಸುಧಾರಣೆಗಾಗಿ ಬ್ರಹ್ಮಶ್ರೀ ನಾರಾಯಣಗುರುಗಳು ಅನನ್ಯ ಸೇವೆ ಸಲ್ಲಿಸಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇವರ ಸಹಯೋಗದಲ್ಲಿ ಭಾನುವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮೌಢ್ಯತೆ, ಶೋಷಣೆಗಳಿಂದ ತುಂಬಿದ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಲು ಶ್ರಮಿಸಿದ ಬ್ರಹ್ಮಶ್ರೀ ಅವರ ಆದರ್ಶ–ವಿಚಾರಗಳ ಬಗ್ಗೆ ಅರಿವು ಹೊಂದಬೇಕು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕು. ಸರ್ವರ ಒಳಿತಿಗಾಗಿ ಶ್ರಮಿಸಿದ ಅವರು ಮಾನವ ಜನಾಂಗದ ಗುರು ಆಗಿದ್ದಾರೆ. ಅವರು ಅನೇಕ ಸಮಾಜಮುಖಿ ಸುಧಾರಣೆಗಾಗಿ ಶ್ರಮಿಸಿದ್ದಾರೆ. ನಾರಾಯಣ ಗುರುಗಳು ಮಾನವೀಯ ಮೌಲ್ಯಗಳನ್ನುಎತ್ತಿಹಿಡಿದು,ಎಲ್ಲರಿಗೂಆದರ್ಶಪ್ರಾಯರಾದ ಸಮಾಜ ಸುಧಾರಕರಾಗಿದ್ದರು. ಸಮಾಜದ ಒಳಿತಿಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ಮಹನೀಯರ ಆದರ್ಶ ಜೀವನ ಚರಿತೆಯನು ನಾವು ಅರಿಯಬೇಕಾಗಿದೆ. ಬ್ರಹ್ಮಶ್ರೀ ನಾರಾಯಣ ಗುರಗಳವರ ತತ್ವಾದರ್ಶಗಳು, ಚಿಂತನೆಗಳನ್ನು ಮುಂದಿನ ಯುವ ಪೀಳಿಗೆಗೆ ತಲುಪಿಸಬೇಕಾಗಿದೆ. ಅವರ ತತ್ವಾದರ್ಶದಲ್ಲಿ ನಡೆದು ಸಶಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸೋಣ ಎಂದು ಅವರು ಹೇಳಿದರು.

ಡಾ. ಎಂ.ಎಸ್. ಮಾಗಣಗೇರಿ ಅವರು ವಿಶೇಷ ಉಪನ್ಯಾಸ ನೀಡಿ, ಬ್ರಹ್ಮಶ್ರೀ ನಾರಾಯಣಗುರುಗಳು ಅಸಮಾನತೆ ಹಾಗೂ ಶೋಷಣೆ ವಿರುದ್ಧ ಹೋರಾಡಿ, ಎಲ್ಲರೂ ಪರಸ್ಪರ ಗೌರವಿಸುವಂತಹ ಸಮ ಸಮಾಜದ ನಿರ್ಮಾಣಕ್ಕೆ ಒತ್ತು ನೀಡಿದವರು. ಅವರು ಶಿಕ್ಷಣದ ಮಹತ್ವದ ಕುರಿತು ತಿಳಿಸಿದ್ದಾರೆ ಎಂದು ಹೇಳಿದರು. ಬ್ರಹ್ಮಶ್ರೀ ನಾರಾಯಣಗುರುಗಳು ಅದ್ದೂರಿ ವಿವಾಹ, ಮಹಿಳೆಯರ ಶೋಷಣೆಗಳ, ಸಮಾಜದಲ್ಲಿನ ಮೌಢ್ಯತೆಗಳಂತಹ ಅನಿಷ್ಟ ಪದ್ಧತಿ ವಿರೋಧಿಸಿ ಅವುಗಳನ್ನು ತೊಡೆದು ಹಾಕಲು ಶಿಕ್ಷಣದಿಂದಲೇ ಸಾಧ್ಯ ಎಂದು ಪ್ರತಿಪಾದಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ ಸ್ವಾಗತಿಸಿದರು.ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ಚಂದ್ರಕಾಂತ ಕುಂಬಾರ ವಂದಿಸಿದರು. ಈ ಸಂದರ್ಭದಲ್ಲಿ ಡಿವೈಎಸ್‌ಪಿ ಎಂ.ಎ.ಉಪಾಸೆ, ಬಸವರಾಜ ಈಳಿಗೇರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾ–ರಿಗಳು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಬ್ರಹ್ಮಶ್ರೀ ನಾರಾಯಣಗುರುಗಳ ಜಯಂತಿ ಅಂಗವಾಗಿ ನಗರದ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಅವರ ಭಾವಚಿತ್ರದ ಮೆರವಣಿಗೆಗೆ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರು ಅವರು ಚಾಲನೆ ನೀಡಿದರು. ಮೆರವಣಿಗೆಯೂ ಕಲಾಮೇಳ ಹಾಗೂ ಕಲಾ ತಂಡಗಳೊಂದಿಗೆ ಗಾಂಧಿ ಚೌಕ್, ಬಸವೇಶ್ವರ ವೃತ್ತ, ಅಂಬೇಡ್ಕರ ವೃತ್ತ ಮಾರ್ಗವಾಗಿ ಕಂದಗಲ್ ಹನುಮಂತರಾಯ ರಂಗಮಂದಿರ ತಲುಪಿ, ಸಮಾವೇಶಗೊಂಡಿತು.

# ಅಕ್ಕಮಹಾದೇವಿ ಮಹಿಳಾ ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆ

## ವಿದ್ಯಾರ್ಥಿಗಳನ್ನು ದೇಶದ ಉತ್ತಮ ಪ್ರಜೆಯನ್ನಾಗಿಸುವ ಕರ್ತವ್ಯ ಶಿಕ್ಷಕರದು: ಪ್ರೊ. ಒಡೆಯರ



**ಬಾಗಲಕೋಟೆ** : ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅಧ್ಯಯನದ ಜೊತಗೆ ಬದುಕಿನ ನೈತಿ–ಕ ಮೌಲ್ಯಗಳಿಂದ ದೇಶದ ಉತ್ತಮ ಪ್ರಜೆಯನ್ನಾಗಿಸುವ ಕರ್ತವ್ಯ ಶಿಕ್ಷಕರದು ಎಂದು ಬಿ.ವಿ.ವಿ.ಸಂಘದ ಅಕ್ಕಮಹಾದೇವಿ ಮಹಿಳಾ ಕಾಲೇಜಿನ ಪ್ರಾಚಾರ್ಯ ಎಸ್. ಎಮ್.ಒಡೆಯರ ಹೇಳದರು.

ಅವರು ಬಿ.ವಿ.ವಿ. ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಐಕ್ಯೂಎಸಿ. ಎನ್.ಎಸ್.ಎಸ್. ಘಟಕ ಹಾಗೂ ಸಾಂಸ್ಕೃತಿ–ಕ ವಿಭಾಗದವರು ಶನಿವಾರ ಹಮ್ಮಿಕೊಂಡ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಸಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ಪಾಠ ಬೋಧನೆ ಮೂಲಕ ದೇಶ ಹಾಗೂ ಸಮಾಜವನ್ನು ಸಂಸ್ಕೃತಿ–ಕವಾಗಿ ನಿರ್ಮಿಸುವ ಜವಾಬ್ದಾರಿ ಶಿಕ್ಷಕರದ್ದಾಗಿದೆ. ಶಿಕ್ಷಕರಿಗೆ ಆತ್ಮ ಸಂತೃಪ್ತಿಯಾಗುವುದು ವಿದ್ಯಾರ್ಥಿಗಳ ಬದುಕು ಸ'ುಂದ'ರ'ವಾಗಿ ನಿರ್ಮಾಣವಾದಾಗ ಮಾತ್ರ ಎಂದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಜಿ.ಆಯ್. ನಂದಿಕೋಲಮಠ ಅವರು ವಿದ್ಯಾರ್ಥಿಗಳ ಬದುಕಿನ ಮೇಲೆ ಶಿಕ್ಷಕರ ಪ್ರಭಾವ ಬಹಳಷ್ಟು ಇರುವುದರಿಂದ ಅದನ್ನು ಜವಾಬ್ದಾರಿತವಾಗಿ ಶಿಕ್ಷಕರು ನಿಭಾಯಿಸಬೇಕೆಂದರು.

ಕಾರ್ಯಕ್ರಮದಲ್ಲಿ ಎನ್.ಎಸ್. ಎಸ್. ಅಧಿಕಾರಿಗಳಾದ ಡಾ, ಎಂ ವಿ ಭಾಜಪ್ಪನವರ್ ಮತ್ತು ಎ ಆರ್ ಬಡಿಗೇರ್ ಹಾಗೂ ಸಾಂಸ್ಕೃತಿ–ಕ ವಿಭಾಗದ ಸಂಯೋಜಕರು ಕುಮಾರಿ ಪೂಜಾ ಅರ್ಕಸಾಲಿ ಉಪಸ್ಥಿತರಿದ್ದರು,

ಕುಮಾರಿ ರತ್ನ ಮಾದಾರ್ ನಿರೂಪಿಸಿದರು, ಪ್ರಾರ್ಥನೆ ಕುಮಾರಿ ಕೀರ್ತಿ ಪಾಟೀಲ್ ವಂದನಾರ್ಪಣೆ ಕುಮಾರಿ ಶಕುಂತಲಾ ದಿವಾನ್ದಾರ್ ಮಾಡಿದರು .ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಎಲ್ಲ ಪ್ರಾಧ್ಯಾಪಕರು ಭಾಗವಹಿಸಿದ್ದರು.

# ನಿವೃತ್ತ ನೌಕರರ ಸಂಘದ ಸಭೆ, 70 ವಸಂತ ಪೂರೈಸಿದ ನಿವೃತ್ತರಿಗೆ ಸನ್ಮಾನ, ಶಿಕ್ಷಕರ ದಿನಾಚರಣೆ: ಸಂಘಟಿತ ಹೋರಾಟದಿಂದ ಸಂಘ ಬೆಳೆಸಿ



**ಗುಳೇದಗುಡ್ಡ** : ಸಂಘಟಿತ ಹೋರಾಟ ಮಾಡದೇ ಹೋದರೆ ಸರ್ಕಾರಿ ಸೌಲಭ್ಯ ಪಡೆಯಲು ಸಾಧ್ಯವಾಗುವುದಿಲ್ಲ. ಪ್ರತಿ ಇಲಾಖೆಯ ನಿವೃತ್ತ ನೌಕರರು ಈ ಸಂಘದ ಸದಸ್ಯರಾಗಬೇಕು. ಸಂಘ ಬೆಳೆಸಬೇಕು. ಆ ಮೂಲಕ ನಿವೃತ್ತಿ ಹಾಗೂ ಸಂಘದ ಇತರೆ ಸೌಲಭ್ಯದ ಲಾಭ ಪಡೆಯಬೇಕೆಂದು ನಿವೃತ್ತ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಜಯರಾವ್ ಕುಲಕರ್ಣಿ ಹೇಳಿದರು.

ಅವರು ಪಟ್ಟಣದ ಕಾಟವಾ ಫಾರ್ಮಹೌಸ್‌ದಲ್ಲಿ ಗುಳೇದಗುಡ್ಡ ಭಾಗದ ನಿವೃತ್ತ ನೌಕರರ ಸಂಘದ ವತಿಯಿಂದ ಹಮ್ಮಿಕೊಂಡ ಶಿಕ್ಷಕರ ದಿನಾಚರಣೆ, 70 ವಸಂತಗಳನ್ನು ಪೂರೈಸಿದ ನಿವೃತ್ತ ನೌಕರರಿಗೆ ಸನ್ಮಾನ ಹಾಗೂ ಸಂಘದ ವಾರ್ಷಿಕ ಸಭೆಯಲ್ಲಿ ಮಾತನಾಡಿ, ಪ್ರತಿಯೊಬ್ಬ ನಿವೃತ್ತ ನೌಕರರು ತಮ್ಮ ಆರೋಗ್ಯದ ಕಡೆಗೆ ಹೆಚ್ಚು ಗಮನ ಹರಿಸಬೇಕು. ಮಾನಸಿಕ ಮಲ, ಸಂಘಟಿತ ಬಲ, ಒಗ್ಗಟ್ಟಿ ಬಲ ಇದ್ದರೆ ಸಂಘ ಉತ್ತರೋತ್ತರ ಪ್ರಗತಿ ಸಾಧಿಸುತ್ತದೆ ಎಂದರು.

ಶಿಕ್ಷಣ ತಜ್ಞ ಡಾ.ವಿ.ಎ.ಬೆನಕನಾಳ ಮಾತನಾಡಿ, ನೌಕರರು ಸೇವೆಯಿಂದ ನಿವೃತ್ತರಾದ ಬಳಿಕ, ಪ್ರವೃತ್ತಿಯಿಂದ ಸಮಾಜಮುಖಿ ಕಾರ್ಯ ಮಾಡಿರಿ. ಸಂಘ ಬೆಳಸಿ ಆ ಮೂಲಕ ತಾವೂ ಸಮಾಜದಲ್ಲಿ ಬೆಳೆಯಬೇಕೆಂದರು.

ಸಂಘದ ತಾಲೂಕು ಅಧ್ಯಕ್ಷ ರವೀಂದ್ರ ಪಾಗಿ ಅಧ್ಯಕ್ಷತೆ ವಹಿಸಿ, ರಾಷ್ಟ್ರ ಪ್ರಶಸ್ತಿ ಪುರಸ್ಕೃತೆ ಶಾಂತಾ ಕರಡಿಗುಡ್ಡ ಮುಖ್ಯ ಅತಿಥಿಗಳಾಗಿ ಹಾಗೂ ಸಂಘದ ಗೌರವಾಧ್ಯಕ್ಷ ಸಿದ್ದರಾಮಯ್ಯ ಪುರಾಣಿಮಠ ಸಂಘದ ಬೆಳವಣಿಗೆ ಕುರಿತು ಮಾತನಾಡಿದರು.

ಇದೇ ಸಂದರ್ಭದಲ್ಲಿ 70 ವಸಂತಗಳನ್ನು ಪೂರೈಸಿದ ನಿವೃತ್ತ ನೌಕರರನ್ನು, ದಾನಿಗಳನ್ನು ಸಂಘದಿಂದ ಸನ್ಮಾನಿಸಲಾಯಿತು. ವಿ.ಪಿ.ದಾಸರ, ಕೋಟೆಕಲ್ಲ ಪಿಕೆಪಿಎಸ್ ಮಾಜಿ ಅಧ್ಯಕ್ಷ ಸಂಗಪ್ಪ ಹಡಪದ, ಜಿ.ಎಸ್.ಬೀಳಗಿ, ಎಸ್.ಸಿ.ಜಾಲಿಹಾಳ, ಕೆ.ಬಿ.ಸೀತಿಮನಿ, ಅಶೋಕ ಪರಗಿ, ಆರ್.ಎನ್. ಕಾಟವಾ, ವೈ.ಜಿ.ತಳವಾರ, ಎಸ್.ಎಂ.ಹುಳಪಲ್ಲೇದ, ಎಸ್.ಬಿ.ಪೂಜಾರ, ಜಿ.ಎಸ್.ಯಂಡಿಗೇರಿ, ಪಿ.ಎನ್. ಹುನಗುಂದ ಇತರರು ಇದ್ದರು.

# ಸಂಗೀತದಲ್ಲಿ ವಚನ ಸಾಹಿತ್ಯದ ಕೊಡುಗೆ ಅಪಾರ: ಮಠಪತಿ



**ಬಾಗಲಕೋಟೆ** : ವಚನ ಗಾಯನ ಶೈಲಿಯು 19ನೇ ಶತಮಾನದಲ್ಲಿ ಬೆಳಕಿಗೆ ಬಂದಿದ್ದು ಸಂಗೀತ ಕ್ಷೇತ್ರಕ್ಕೆ ಕನ್ನಡಿಗರು ನೀಡಿದ ಶ್ರೇಷ್ಠ ಕೊಡುಗೆಯಾಗಿದೆ ಎಂದು ವಿಶ್ರಾಂತ ಪ್ರಾಚಾರ್ಯರಾದ ಪಂ.ಡಾ. ಎಸ್. ಆರ್ ಮಠಪತಿ ಅವರು ಹೇಳಿದರು.

ನಗರದ ಬಿ.ವಿ.ವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯ ಮತ್ತು ಬೆಂಗಳೂರಿನ ಅಜಿಮ್ ಪ್ರೇಮ್ಜಿ ವಿವಿ ಸಹಯೋಗದಲ್ಲಿ ಶನಿವಾರದಂದು ಹಮ್ಮಿಕೊಂಡಿದ್ದ ವಚನ ಗಾಯನ ಸ್ಪರ್ಧೆಯನ್ನು ಸಸಿಗೆ ನೀರೆರೆಯುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಸಂಗೀತದಲ್ಲಿ ಅನೇಕ ಪ್ರಕಾರಗಳಿವೆ ಅವುಗಳಲ್ಲಿಪಂಚಾಕ್ಷರಿಗವಾಯಿಗಳುಹುಟ್ಟು ಹಾಕಿದ ವಚನ ಗಾಯನವು ಒಂದಾಗಿದೆ. 1906ರಲ್ಲಿ ಬಾಗಲಕೋಟೆಯ ತೆಗ್ಗಿನ ಮಠದಲ್ಲಿ ಅವರು ಹಾಡಿದ ವಚನ ಸಾಹಿತ್ಯ ಮೆಚ್ಚಿ ಹಾನಗಲ್ಲ ಕುಮಾರಸ್ವಾಮಿಗಳು ಪಂಚಾಕ್ಷರಿ ಗವಾಯಿ ಎಂಬ ನಾಮಕರಣ ಮಾಡುತ್ತಾರೆ.

ಬಳಿಕ ಡಾ.ಮಲ್ಲಿಕಾರ್ಜುನ ಮನಸೂರ ಅವರು ದೂರದರ್ಶನದ ನೇರ ಪ್ರಸಾರದಲ್ಲಿ ವಚನಗಾಯನ ಮಾಡಿ ಅದನ್ನು ಮತ್ತಷ್ಟು ಪ್ರಚುರಪಡಿಸಿದ್ದು ವಚನ ಗಾಯನವು ಸಾಹಿತ್ಯದಲ್ಲಿ ಅನೇಕ ರೀತಿಯ ಬೆಳವಣಿಗೆಯನ್ನು ಕಂಡಿದೆ ಎಂದರು.

ಪ್ರಸ್ತುತ ದೇಶದೆಲ್ಲೆಡೆ ವಚನವು ಸಂಗೀತ ಶೈಲಿಯಾಗಿ ಮಾರ್ಪಟ್ಟಿದ್ದು ಈಗಿನ ಸಂಗೀತ ಕಚೇರಿಗಳಲ್ಲಿ ಗಾಯನದ ಕೊನೆಯಲ್ಲಿ ವಚನದ ಮೂಲಕ ಅಂತ್ಯಗೊಳಿಸುವ ಪ್ರತೀತಿ ಬೆಳೆದಿದೆ.


ಶಬ್ದ ಮತ್ತು ಅರ್ಥ ದೋಷವಾಗದಂತೆ ಹಾಡುವ ಅಭ್ಯಾಸವನ್ನು ವಿದ್ಯಾರ್ಥಿಗಳು ಬೆಳಸಿಕೊಳ್ಳಬೇಕು ಎಂದರು.

ಪ್ರಾಚಾರ್ಯರಾದ ಎಸ್.ಆರ್ ಮೂಗನೂರಮಠ ಅವರು ಮಾತನಾಡಿ ಗದ್ಯವೂ ಅಲ್ಲದ ಪದ್ಯವೂ ಅಲ್ಲದ ವಿಶಿಷ್ಟವಾದ ರಚನೆಯನ್ನು ವಚನಗಳು ಹೊಂದಿದ್ದು ಹತ್ತನೆ ಶತಮಾನಮದಲ್ಲಿಯೇ ವಚನಗಳ ರಚನೆ ಪ್ರಾರಂಭವಾದವು. ಅನುಭವ ಮಂಟಪ ಪ್ರಾರಂಭವಾದ ನಂತರ ಅವುಗಳು ವಿಶಿಷ್ಟ ರೂಪ ಪಡೆದವು. ಸಾಹಿತ್ಯ ಮತ್ತು ಸಂಗೀತಕ್ಕೆ ಅವಿನಾಭಾವ ಸಂಬಂಧವಿದೆ. ಸಂಗೀತ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟ ಕೀರ್ತಿ ರೇಡಿಯೋ ಮಾಧ್ಯಮಕ್ಕೆ ಸಲ್ಲುತ್ತದೆ. ವಚನಗಳು ಕನ್ನಡದ ವೈಶಿಷ್ಟ್ಯವಾಗಿದ್ದು ಅದನ್ನು ವಿದ್ಯಾರ್ಥಿಗಳ ಮಟ್ಟದಲ್ಲಿ ಪ್ರಚಾರಮಾಡಲು ಇಂತಹ ಸ್ಪರ್ಧೆ ಏರ್ಪಡಿಸಿರುವುದು ಸಂತಸದ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಚಟುವಟಿ–ಕೆಗಳ ಸಂಯೋಜಕರಾದ ಡಾ.ಕೆ.ವಿ ಮಠ, ಪ್ರಾಧ್ಯಾಪಕರುಗಳಾದ ಡಾ.ಎಸ್.ಡಿ ಕೆಂಗಲಗುತ್ತಿ,ಡಾ.ಆರ್.ಎಮ್‌ಬೆಣ್ಣೂರಸೇ–ರಿದಂತೆ, ವಚನಗಾಯನ ಸ್ಪರ್ಧಾರ್ಥಿಗಳು ಮತ್ತು ಉಪನ್ಯಾಸಕರು ಉಪಸ್ಥಿತರಿದ್ದರು.

ನಾದಮಯಗೊಂಡ ವಚನಗಾಯನ: ಕಾರ್ಯಕ್ರಮದಲ್ಲಿ ಹಮ್ಮಿಕೊಂಡ ವಚನಗಾಯನ ಸ್ಪರ್ಧೆಯಲ್ಲಿ ಜಿಲ್ಲೆಯ ಬಾದಾಮಿ, ಜಮಖಂಡಿ, ಮುಧೋಳ, ಇಳಕಲ್, ಮಹಾಲಿಂಗಪೂರ, ಲೋಕಾಪುರ ಸೇರಿದಂತೆ ವಿವಿಧ ಭಾಗದ 18 ಕಾಲೇಜುಗಳ 57 ವಿದ್ಯಾರ್ಥಿಗಳು ಪಾಲ್ಗೊಂಡು ವಚನವಾಚನ ಮಾಡಿದರು. ಪ್ರತಿ ಕಾಲೇಜಿನ 5 ಜನ ಸ್ಪರ್ಧಾರ್ಥಿಗಳು ಭಾಗಿಯಾಗಿದ್ದರು. ನಿರ್ಣಾಯಕರಾಗಿ ಪಂ.ಎಸ್.ಆರ್ ಮಠಪತಿ, ಡಾ.ಕೆ.ವಿ ಮಠ, ಡಾ.ಎಸ್.ಡಿ ಕೆಂಗಲಗುತ್ತಿ, ಡಾ.ಆರ್.ಎಮ್ ಬೆಣ್ಣೂರ ಪಾಲ್ಗೊಂಡಿದ್ದರು.

# ಮಾದೇವ ದಡ್ಡಿಮನಿ ಅವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ



**ಹಳ್ಳೂರ** : ಶಿಕ್ಷಕರ ದಿನಾಚರಣೆ ನಿಮಿತ್ಯ ಕರ್ನಾಟಕ ರಾಜ್ಯ ಪ್ರೌಡ ಶಾಲಾ ಶಿಕ್ಷಕರ ಸಂಘ ಮೂಡಲಗಿ ತಾಲೂಕಾ ಮಟ್ಟದ ವತಿಯಿಂದ ಕೊಡಮಾಡುವ ಬ ಕು ಮ ಪ್ರೌಢಶಾಲೆ ಹಳ್ಳೂರ ಪ್ರೌಡ ಶಾಲೆಯಲ್ಲಿ ಕನ್ನಡ ಭಾಷೆ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಮಹಾದೇವ ತುಕ್ಕಪ್ಪ ದಡ್ಡಿಮನಿ ಇವರಿಗೆ 2025ನೇ ಸಾಲಿನ ತಾಲೂಕ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿರುತ್ತಾರೆ.

ಅವರಿಗೆ ಬ ಕು ಮ ಪ್ರೌಡ ಶಾಲೆಯ ಗುರುಗಳು ವಿದ್ಯಾರ್ಥಿಗಳು ,ಹಳ್ಳೂರ,ಕಪ್ಪಲಗುದ್ದಿ ಗ್ರಾಮಸ್ಥರು ಅಭಿನಂದನೆಗಳು ಸಲ್ಲಿಸಿದ್ದಾರೆ.



**ಚಿಮ್ಮಡ ಗ್ರಾಮದ ಪಿ.ಪಿ. ಮಾಳಿಗಡ್ಡಿ ಮಠದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರದಂದು ಶಿಕ್ಷಣತಜ್ಞಡಾ. ಸರ್ವಪಲ್ಲಿ ರಾಧಾಕೃಷ್ಣನ್ ರವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸು ಮೂಲಕ ಶಿಕ್ಷಕರ ದಿನಾಚರಣೆ ಆಚ–ರಿಸಲಾಯಿತು. ಶಾಲೆಯ ಮುಖ್ಯ ಗುರುಮಾತೆ ಶ್ರೀಮತಿ ಎಸ್.ಡಿ. ಹಿರೇಮಠ, ಹಾಗೂ ಸಹ ಶಿಕ್ಷಕರು ಈ ಸಂಧರ್ಬದಲ್ಲಿ ಉಪಸ್ಥಿತರಿದ್ದರು.**

# ‘ಮಕ್ಕಳ ಅಭಿವೃದ್ಧಿ: ಶಿಕ್ಷಕರ ಪಾತ್ರ ಮುಖ್ಯ’

**ಕೊಪ್ಪಳ :** ‘ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಶಿಕ್ಷಕರು ಶ್ರಮಿಸಬೇಕು’ ಎಂದು ಶಾಸಕ ರಾಘವೇಂದ್ರ ಹಿಟ್ನಾಳ ತಿಳಿಸಿದರು.

ನಗರದು ಸಾಹಿತ್ಯ ಭವನದಲ್ಲಿ ಶನಿವಾರ ಜಿಲ್ಲಾಡಳಿತ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಮತ್ತು ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ವಿದ್ಯಾರ್ಜನೆಯಲ್ಲಿ ಶಿಕ್ಷಕರು ಸದಾ ಕಾಲ ಕಾರ್ಯಕರ್ತರರಾಗಿ ಗುರಿ ಸಾಧನೆ ಕಡೆಗೆ ಶ್ರಮಿಸಬೇಕಿದೆ ಎಂದರು.

ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್ ಮಾತನಾಡಿ, ‘ಶಿಕ್ಷಣದಿಂದ ಮಾತ್ರ ದೇಶದ ಸುಧಾರಣೆ ಸಾಧ್ಯ. ಹೀಗಾಗಿ ಶಿಕ್ಷಣ ಎಲ್ಲರಿಗೂ ಅವಶ್ಯ.

ಆಧುನಿಕ ಯುಗದಲ್ಲಿ ಶಿಕ್ಷಣ ಇಲ್ಲದ ಮನುಷ್ಯನಿಗೆ ಬೆಲೆ ಇಲ್ಲದಂತಾಗಿದೆ. ಹೀಗಾಗಿ ಎಲ್ಲರೂ ಶಿಕ್ಷಣ ಪಡೆದುಕೊಂಡು ಉತ್ತಮ ನಾಗರಿಕರಾಗಬೇಕು’ಎಂದರು.




ವಿಧಾನಪರಿಷತ್ ಸದಸ್ಯ ಹೇಮಲತಾ ನಾಯಕ ಮಾತನಾಡಿ, ಸರ್ಕಾರಿ ಶಾಲೆಗೆ ಬರುವ ಮಕ್ಕಳು ಪ್ರತಿಭಾವಂತರಾಗಿರುತ್ತಾರೆ. ಅವರುಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅವರ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದರು.

ಸಂದರ್ಭದಲ್ಲಿ ಪ್ರಶಸ್ತಿ ಪಡೆದ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು. ನಗರಾಭಿವೃದ್ಧಿಪ್ರಾಧಿಕಾರಅಧ್ಯಕ್ಷಶ್ರೀನಿವಾಸ್ ಗುಪ್ತಾ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ. ರೆಡ್ಡಿ ಶ್ರೀನಿವಾಸ್, ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ನಾಗರಾಜ ಜುಮ್ಮನ್ನವರ್, ಡಿಡಿಪಿಐ ಸೋಮಶೇಖರ್‌ಗೌಡ, ಬಾಬುಸಾಬ್ ಲೈನ್‌ದಾರ್, ಮಾರ್ತಾಂಡರಾವ್ ದೇಸಾಯಿ, ಉಮೇಶ್ ಕಂಬಳಿ, ಮಾರುತಿ ಮ್ಯಾಗಳಮನಿ, ಅಯ್ಯಣ್ಣ ಮರದೂರು, ಶಿವಾನಂದ್‌ಯ್ಯ ಕುಣಿಕೇರಿಮಠ, ಮಮತಾ ಕೊಡಬಾಳ್ ಇದ್ದರು.

# ‘ಕಾನೂನು ಪಾಲನೆ ವಕೀಲರ ಕರ್ತವ್ಯ’



**ಕೊಪ್ಪಳ :** ‘ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳಲ್ಲಿ ಮಹಿಳಾ ನ್ಯಾಯಾಧೀಶರ ಸಂಖ್ಯೆ ಕಡಿಮೆ ಇದೆ. ಹಾಗಾಗಿಒಲ್ಲಮಹಿಳಾವಕೀಲರುಆದ್ಯತೆ ಮೇರೆಗೆ ನ್ಯಾಯಾಧೀಶೆಯರಾಗಿ ಕಾರ್ಯನಿರ್ವಹಿಸಬೇಕು’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಪಿ.ಶ್ರೀಸುಧಾ ಹೇಳಿದರು.

ನಗರದ ನ್ಯಾಯಾಲಯದ ಆವರಣದಲ್ಲಿನ ವಕೀಲರ ಸಂಘದ ಸಭಾಂಗಣದಲ್ಲಿ ಶನಿವಾರ ಜಿಲ್ಲಾ ವಕೀಲರ ಸಂಘ ವತಿಯಿಂದ ಆಯೋಜಿ ಸಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

‘ಮಹಿಳಾ ವಕೀಲರಿಗೆ ಕೌಟುಂಬಿಕ ಜವಾಬ್ದಾರಿ, ಕರ್ತವ್ಯಗಳು ಹಾಗೂ ತೊಂದರೆಗಳು ಇರುತ್ತವೆ. ಇದರಿಂದಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ತೊಂದರೆಯಾಗುತ್ತದೆ. ಆದರೂ ಕೂಡಾ ಸಮಸ್ಯೆಗಳನ್ನು ಎದುರಿಸಿ ಮಹಿಳೆಯರು ಉತ್ತಮ ವಕೀಲರಾಗಿ ಕಾರ್ಯನಿರ್ವಹಿಸಬೇಕು’ ಎಂದರು.

ಹೊಸ ನ್ಯಾಯಾಲಯ ಸಂಕೀರ್ಣ ಕಟ್ಟಡ ಕಾಮಗಾರಿ ಶೀಘ್ರವಾಗಿ ಪೂರ್ಣಗೊಳಿಸಬೇಕು. ರಾಜ್ಯದ ಎಲ್ಲ ಕಡೆಗಳಲ್ಲಿನ ನ್ಯಾಯಾಲಯಗಳಲ್ಲಿ ಮೂಲಸೌಕರ್ಯ ಒದಗಿಸಲು ಸರ್ಕಾರ ಮತ್ತು ಹೈಕೋರ್ಟ್ ಚಿಂತನೆ ನಡೆಸಿದೆ ಎಂದರು.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಸಿ.ಚಂದ್ರಶೇಖರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎ.ವಿ.ಕಣವಿ, ಹಿರಿಯ ವಕೀಲರಾದ ಆಸೀಫ್ ಅಲಿ, ಸಂಧ್ಯಾ ಮಾದಿನೂರು, ಸಂಘದ ಉಪಾಧ್ಯಕ್ಷ ಬಿ.ವಿ.ಸಜ್ಜನ್, ಪ್ರಧಾನ ಕಾರ್ಯದರ್ಶಿ ಪ್ರಕಾಶ ಹಾದಿಮನಿ, ಜಂಟಿ ಕಾರ್ಯದರ್ಶಿ ಸಂತೋಷ ಕವಲೂರು, ಖಜಾಂಚಿ ರಾಜಾಸಾಹೇಬ್ ಇದ್ದರು.

# ಶ್ರೀ ಸ್ಟಾರ್ ಗೋಲ್ಡ್ 6 ನೇ ವಾರ್ಷಿಕೋತ್ಸವ: ಹೊಸ ಬ್ರಾಂಡ್ ಅಂಬಾಸಿಡರ್ ಆಗಿ ನಟಿ ಅಂಜಲಿ ಆಯ್ಕೆ

**ಬೆಂಗಳೂರು :** ಚಿನ್ನ ಖರೀದಿ, ಮಾರಾಟ, ಬಾಡಿಗೆ ಮತ್ತು ಬಿಡುಗಡೆ ಸೇವೆಗಳನ್ನು ಒಂದೇ ವಿಶ್ವಾಸಾರ್ಹ ವೇದಿಕೆಯಡಿ ಒದಗಿಸುವ ಭಾರತದ ಏಕೈಕ ಸಂಯೋಜಿತ ಬ್ರಾಂಡ್ ಶ್ರೀ ಸ್ಟಾರ್ ಗೋಲ್ಡ್ ಇಂದು ಬೆಂಗಳೂರಿನ ಹೋಟೆಲ್ ಜಗದೀಶ್ ಇಂಟರ್ನ್ಯಾಷನಲ್‌ನಲ್ಲಿ ತನ್ನ 6 ನೇ ವಾರ್ಷಿಕೋತ್ಸವವನ್ನು ಆಚರಿಸುವ ಮೂಲಕ ಮಹತ್ವದ ಮೈಲಿಗಲ್ಲನ್ನು ತಲುಪಿತು.

ಕಳೆದ ಆರು ವರ್ಷಗಳಲ್ಲಿ, ಶ್ರೀಸ್ಟಾರ್ ಗೋಲ್ಡ್ ಚಿನ್ನದ ಉದ್ಯಮದಲ್ಲಿ ಗೇಮ್ ಚೇಂಜರ್ ಆಗಿ ಹೊರಹೊಮ್ಮಿದೆ. ಗ್ರಾಹಕರ ನಂಬಿಕೆ ಮತ್ತು ಅನುಕೂಲವನ್ನು ವ್ಯಾಖ್ಯಾನಿಸುತ್ತದೆ ಮತ್ತು ಪಾರದರ್ಶಕತೆ ಮತ್ತು ನಾವೀನ್ಯತೆಗಾಗಿ ಪ್ರಖ್ಯಾತಿ ಪಡೆದಿದೆ. ವಾರ್ಷಿಕೋತ್ಸವ ಕಾರ್ಯಕ್ರಮವು ಕಂಪನಿಗಳ ನಾಯಕತ್ವ, ಉದ್ಯೋಗಿಗಳು, ಪಾಲುದಾರರು ಮತ್ತು ಮಧ್ಯಸ್ಥಗಾರರನ್ನು ಅದರ ಪ್ರಯಾಣದ ಬಗ್ಗೆ ಪ್ರತಿಬಿಂಬಿಸಲು, ಪ್ರಮುಖ ಸಾಧನೆಗಳನ್ನು ಗುರುತಿಸಲು ಮತ್ತು ಭವಿಷ್ಯದ ದೃಷ್ಟಿಕೋನವನ್ನು ರೂಪಿಸಲು ಒಟ್ಟುಗೂಡಿಸಿತು.

ನಟಿ ಅಂಜಲಿ ಬ್ರಾಂಡ್ ಅಂಬಾಸಿಡರ್: ಶ್ರೀಸ್ಟಾರ್ ಗೋಲ್ಡ್ ತನ್ನ ಹೊಸ ಬ್ರಾಂಡ್ ಅಂಬಾಸಿಡರ್ ಆಗಿ ಮಿಸ್ ಅಂಜಲಿ ಅವರನ್ನು ನೇಮಿಸಿದೆ. ತನ್ನ ಸೊಬಗು, ವಿಶ್ವಾಸಾರ್ಹತೆ ಮತ್ತು ಯುವ ಆಕರ್ಷಣೆಗಾಗಿ ಮೆಚ್ಚುಗೆ ಪಡೆದ ಉದಯೋನ್ಮುಖ ತಾರೆ ಮಿಸ್ ಅಂಜಲಿ, ಶ್ರೀಸ್ಟಾರ್ ಗೋಲ್ಡನ ನಂಬಿಕೆ, ಸಮಗ್ರತೆಯ ಮೌಲ್ಯಗಳನ್ನು ಪ್ರತಿನಿಧಿಸಲಿದ್ದಾರೆ.




ಈಸಂದರ್ಭದಲ್ಲಿಮಾತನಾಡಿದಕಂಪನಿಯ ವಕ್ತಾರ ಶ್ರೀ ಶ್ರೀಕಾಂತ್, ನಾವು ಆರು ಯಶಸ್ವಿ ವರ್ಷಗಳನ್ನು ಪೂರ್ಣಗೊಳಿಸುತ್ತಿರುವಾಗ, ಇದು ಸಂಭ್ರಮಾಚರಣೆಗಿಂತ ಹೆಚ್ಚಿನದಾಗಿದೆ. ಇದು ಚಿನ್ನದ ಕ್ಷೇತ್ರದಲ್ಲಿ ಸಾಟಿಯಿಲ್ಲದ ಸೇವೆಗಳ ಮೂಲಕ ಗ್ರಾಹಕರಿಗೆ ಮೌಲ್ಯವನ್ನು ಸೃಷ್ಟಿಸುವ ನಮ್ಮ ಬದ್ಧತೆಯನ್ನು ಪುನರುಚ್ಚರಿಸುತ್ತದೆ. ಮಿಸ್ ಅಂಜಲಿ ಶ್ರೀ ಸ್ಟಾರ್ ಗೋಲ್ಡ್‌ನ ಸ್ಫೂರ್ತಿಯನ್ನು ಸಾಕಾರಗೊಳಿಸಿದ್ದಾರೆ ಮತ್ತುನಾವುನಮ್ಮಮುಂದಿನಬೆಳವಣಿಗೆಯ ಹಂತವನ್ನು ಪ್ರವೇಶಿಸುತ್ತಿದ್ದಂತೆ ವಿಶಾಲ ಪ್ರೇಕ್ಷಕರೊಂದಿಗೆ ಸಂಪರ್ಕ ಸಾಧಿಸಲು ಅವರು ನಮಗೆ ಸಹಾಯ ಮಾಡುತ್ತಾರೆ ಎಂದು ನಮಗೆ ವಿಶ್ವಾಸವಿದೆ" ಎಂದರು.

ವಾರ್ಷಿಕೋತ್ಸವವು ಮಾಧ್ಯಮಗಳೊಂದಿಗೆ ತೊಡಗಿಸಿಕೊಳ್ಳಲು, ತಂಡದ ಬಂಧಗಳನ್ನು ಬಲಪಡಿಸಲು ಮತ್ತು ಮಧ್ಯಸ್ಥಗಾರರ ಸಂಬಂಧಗಳನ್ನು ಆಳಗೊಳಿಸಲು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸಿತು. ಶ್ರೀಸ್ಟಾರ್ ಗೋಲ್ಡ್ ಗ್ರಾಹಕರ ಸಬಲೀಕರಣ, ಡಿಜಿಟಲ್ ನಾವೀನ್ಯತೆ ಮತ್ತು ಭಾರತದಾದ್ಯಂತ ಹೆಚ್ಚಿನ ಮಾರುಕಟ್ಟೆಗಳಿಗೆ ತನ್ನ ವಿಶಿಷ್ಟ ಆಲ್–ಇನ್–ಒನ್ ಚಿನ್ನದ ಪರಿಹಾರಗಳನ್ನು ವಿಸ್ತರಿಸುವತ್ತ ತನ್ನ ಗಮನವನ್ನು ಪುನರುಚ್ಚರಿಸಿತು.

ಶ್ರೀಸ್ಟಾರ್ ಗೋಲ್ಡ್ ಬಗ್ಗೆ: ಶ್ರೀಸ್ಟಾರ್ ಗೋಲ್ಡ್ ಭಾರತದ ಪ್ರವರ್ತಕ ಬ್ರಾಂಡ್ ಆಗಿದ್ದು, ಇದು ಚಿನ್ನ ಖರೀದಿ, ಮಾರಾಟ, ಬಾಡಿಗೆ ಮತ್ತು ಬಿಡುಗಡೆ ಸೇವೆಗಳನ್ನು ಒಂದು ವಿಶ್ವಾಸಾರ್ಹ ಹೆಸರಿನಲ್ಲಿ ಸಂಯೋಜಿಸುತ್ತದೆ.

2019 ರಲ್ಲಿ ಸ್ಥಾಪನೆಯಾದ ಕಂಪನಿಯು ವಿಶ್ವಾಸ, ಪಾರದರ್ಶಕತೆ ಮತ್ತು ಗ್ರಾಹಕರ ತೃಪ್ತಿಗೆ ಒತ್ತು ನೀಡುವ ಮೂಲಕ ಚಿನ್ನದ ಉದ್ಯಮದಲ್ಲಿ ಬಲವಾದ ಉಪಸ್ಥಿತಿಯನ್ನು ಹೊಂದಿದೆ.

# ನೂತನ ಎಸ್‌ಡಿಎಂಸಿ ಪದಾಧಿಕಾರಿಗಳ ನೇಮಕ




**ಲೋಕಾಪುರ :** ಸಮೀಪದ ಭಂಟನೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ಎಸ್‌ಡಿಎಂಸಿ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು. ಅಧ್ಯಕ್ಷರನ್ನಾಗಿ ಲಕ್ಷ್ಮಣ ಮುಗಳೊಳ್ಳಿ ಹಾಗೂ ಉಪಾಧ್ಯಕ್ಷರನ್ನಾಗಿ ದ್ಯಾಮವ್ವ ಹಿರಕನ್ನವರ ಅವರನ್ನು ಆಯ್ಕೆ ಮಾಡಲಾಯಿತು.

ಪೋಷಕ ಪ್ರತಿನಿಧಿಗಳಾಗಿ ಹನುಮಂತ ಮ್ಯಾಗೇರಿ, ಚಂದ್ರಪ್ಪ ಶೆಲ್ಲಿಕೇರಿ, ಮಲ್ಲಪ್ಪ ಉತ್ತೂರ, ಮಂಜುನಾಥ ಬಸುನಾಯಕ, ವೆಂಕಟೇಶ ಬಿರಾದಾರ, ರಾಜು ಕರ್ನಾಚಿ, ರಮೇಶ ನಾಗಪ್ಪನವರ, ವೆಂಕಟೇಶ ಅಮಲಝರಿ, ಸವಿತಾ ಹಾದಿಮನಿ, ಸಕ್ಕುಬಾಯಿ ನಾವಲಗಿ, ರೇಣುಕಾ ಭಜಂತ್ರಿ , ಹೇಮವ್ವ ಬೆಳಗಲಿ, ಲಕ್ಷ್ಮೀಬಾಯಿ ರಂಗನ್ನವರ, ಲಕ್ಷ್ಮಿಬಾಯಿ ಬಸುನಾಯಕ , ಭಾಗೀರಥಿ ಮಠಪತಿ, ಜಯಶ್ರೀ ಬಾರಕೇರ, ಇವರನ್ನು ಆಯ್ಕೆ ಮಾಡಲಾಗಿದೆ.

ಪದನಿಮಿತ್ತ ಸದಸ್ಯರನ್ನಾಗಿ ಮುಖ್ಯ ಗುರು ಎಚ್ ಎಸ್ ನಾಗಪ್ಪನವರ, ಸುಶೀಲಾ ಮಾದರ, ಜ್ಯೋತಿ ರಂಗನ್ನವರ ಇವರನ್ನು ಆಯ್ಕೆ ಮಾಡಲಾಗಿದೆ.

ನಾಮನಿರ್ದೇಶಕ ಸದಸ್ಯರನ್ನಾಗಿ ಸವಿತಾ ಹರಿಜನ, ಎಚ್.ಟಿ. ಕಿತ್ತೂರ , ಆರತಿ ಬಸುನಾಯಕ ಇವರನ್ನು ಆಯ್ಕೆ ಮಾಡಲಾಗಿದೆ.

ಈ ವೇಳೆ ಶಿಕ್ಷಣ ಪ್ರೇಮಿ ಲಕ್ಷ್ಮಣ ಮಾಲಗಿ, ಶಾಲೆಯ ಶಿಕ್ಷಕವೃಂದ, ಪಾಲಕರು , ಗ್ರಾಮದ ಗುರು ಹಿರಿಯರು, ಗ್ರಾಮಸ್ಥರು ಭಾಗವಹಿಸಿದ್ದರು.

### ವಿಶ್ವ ಛಾಯಾಗ್ರಾಹಕರ ದಿನಾಚರಣೆ ಕಾರ್ಯಕ್ರಮ

# ಛಾಯಾಗ್ರಾಹಕರಿಗೆ ಸಮಾಜಿಕ ಭದ್ರತೆ ಇಲ್ಲ: ವಿಪ ಸದಸ್ಯ ಪಿ.ಎಚ್.ಪೂಜಾರ ಬೇಸರ

**ಬಾಗಲಕೋಟೆ:** ಛಾಯಾಗ್ರಾಹಕರಿಗೆ ಯಾವುದೇ ಸಾಮಾಜಿಕ ಭದ್ರತೆ ಇಲ್ಲದೇ, ತಮ್ಮನ್ನು ನಂಬಿಕೊಂಡ ಕುಟುಂಬವನ್ನು ಮುನ್ನಡೆಸಲು ಛಾಯಾಗ್ರಾಹಕರ ಇಂದು ಪರದಾಡುತ್ತಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಬೇಸರ ವ್ಯಕ್ತ ಪಡಿಸಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ತಾಲೂಕು ಪೋಟೋಗ್ರಾರ್ಸ್ ಮತ್ತು ವಿಡಿಯೋಗ್ರಾರ್ಸ್ ಸಂಘದ ವತಿಯಿಂದ ಆಯೋಜಿಸಿದ್ದ ವಿಶ್ವ ಛಾಯಾಗ್ರಾಹಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸರಕಾರದಿಂದ ಯಾವುದೇ ಸೌಲಭ್ಯಗಳು ಛಾಯಾಗ್ರಾಹಕರಿಗೆ ಇಲ್ಲ. ಹಾಗಾಗಿ ಮುಂದಿನ ಡಿಸೆಂಬರ್ ಅಧಿವೇಶನದಲ್ಲಿ ನಿಮಗಾಗಿ ಧ್ವನಿ ಎತ್ತುವೆ.ನಗರದಲ್ಲಿಛಾಯಾಭವನ ನಿರ್ಮಾಣಕ್ಕೆ ನಿವೇಶನ ಸಲುವಾಗಿ ಶಾಸಕ ಎಚ್.ವೈ.ಮೇಟಿ ಅವರಿಗೆ ನಾನು ಸಹ ಮನವಿ ಮಾಡುವೆ ಎಂದು ಹೇಳಿ, ಭವನಕ್ಕೆ ನನ್ನ ಅನುದಾನದಲ್ಲಿ ಆರ್ಥಿಕ ನೆರವು ನೀಡುವ ಭರವಸೆ ನೀಡಿದರು.



ಯುವ ಮುಖಂಡ ಸಂತೋಷ ಹೊಕ್ರಾಣಿ ಮಾತನಾಡಿ, ಜಗತ್ತಿನ ಇತಿಹಾಸನಮಗೆಪೋಟೋಗ್ರಾಫಿ ಮೂಲಕ ತಿಳಿಯುತ್ತದೆ. ಪೋಟೋಗ್ರಾಫಿ ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಮಹತ್ವದ ಸ್ಥಾನ ಹೊಂದಿದೆ. ಛಾಯಾಗ್ರಾಹಕರು ಮೊದಲು ಒಗ್ಗಟ್ಟಾಗಬೇಕು. ಏಕೆಂದರೆ ನಿಮ್ಮ ಸಂಘದಲ್ಲಿ ನಿಮಗೆ ನೀಡಿದ ರೇಟಿನ ಬೋರ್ಡ್ ಪ್ರಕಾರ ನೀವು ಆರ್ಡರ್ ಮಾಡಬೇಕು ಅಂದಾಗ ಮಾತ್ರ ನೀವು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು. ಪೋಟೋಗ್ರಾಫಿ ಮೂಲಕಜೀವನಸಾಗಿಸಬಹುದೇ ಹೊರತುಆದಾಯಮಾಡುವುದಕ್ಕೆ ಆಗುವದಿಲ್ಲ. ಅದಕ್ಕಾಗಿ ಈ ಉದ್ಯೋಗದಜತೆಗೆಮೊತ್ತೊಂದು ಉದ್ಯೋಗ ಸಹ ಮಾಡಬೇಕು ಎಂದು ಛಾಯಾಗ್ರಾಹಕರಿಗೆ ಸಲಹೆ ನೀಡಿದ ಅವರು, ಛಾಯಾ ಭವನಕ್ಕೆ ನನ್ನ ಕೈಲಾದ ಮಟ್ಟಿಗೆ ಆರ್ಥಿಕ ಸಹಾಯ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಹಿರಿಯ ಪತ್ರಕರ್ತ ರವಿರಾಜ ಗಲಿಗಲಿ ಮಾತನಾಡಿ, ಛಾಯಾಗ್ರಾಹಕರು ಕೋವಿಡ್ ಸಮಯದಲ್ಲಿ ಸಾಕಷ್ಟು ಕಷ್ಟವನ್ನು ಅನುಭವಿಸಿದ್ದಾರೆ. ಸರಕಾರದಿಂದ ಛಾಯಾಗ್ರಾಹಕರಿಗಾಗಿಯೇ ಯಾವುದೇ ಕೌಶಲ್ಯ ಅಭಿವೃದ್ಧಿ ನಿಗಮ ಇಲ್ಲ. ಅದಕ್ಕಾಗಿ ಮಾಧ್ಯಮ ಆಕಾಡಮೆ ಮೂಲಕ ನಿಧಿ ಸ್ಥಾಪನೆ ಮಾಡಿ ಅದರ ಮೂಲಕ ಛಾಯಾಗ್ರಾಹಕರಿಗೆ ಸಾಲ ಸೌಲಭ್ಯ ನೀಡಲು ಅನುಕೂಲ ಆಗುತ್ತದೆ ಎಂದರು. ಸಂಘದ ತಾಲೂಕಾಧ್ಯಕ್ಷ ಚಂದ್ರುಅಂಬಿಗೇರ ಮಾತನಾಡಿ, ಛಾಯಾಗ್ರಾಹಕರು ಒಗ್ಗಟ್ಟಾದಾಗ ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯ. ಪ್ರತಿಯೊಬ್ಬ ಛಾಯಾಗ್ರಾಹಕರು ಸಂಘದಲ್ಲಿ ಸದಸ್ಯತ್ವವನ್ನು ಖಡ್ಡಾಯವಾಗಿ ಹೊಂದಿ ಎಂದರು.

ಪ್ರಾಸ್ತಾವಿಕವಾಗಿ ಬೆಂಗಳೂರಿನ ಕೆಪಿಎ ಜಿಲ್ಲಾ ನಿರ್ದೇಶಕ ವಿಠ್ಠಲ ಹಿರೇಮಠ ಮಾತನಾಡಿದರು. ಜಿಲ್ಲಾಧ್ಯಕ್ಷ ಜಗದೀಶ ಅಂಬಿಗೇರ, ರಾಜು ಗವಳಿ, ಪಪ್ಪು ಕರವಾ, ಬಸವರಾಜ ಧರ್ಮಂತಿ, ಬಾಬು ಮುದ್ದೇಬಿಹಾಳ, ವಾಸು ಝಿಂಗಾಡೆ, ಸಂತೋಷ ಹಂಜಗಿ, ರಾಘುಕಲಾಲ,ವಿರೇಶಹಿರೇಮಠ, ವಿಠ್ಠಲ ಮೂಲಿಮನಿ, ಅಂಬರೀಶ ಗಚ್ಚಿನಮನಿ, ಮಂಜುನಾಥ ಗೋಡೆಪ್ಪನವರ, ಸುರೇಶ ಮಜ್ಜಿಗಿ, ಹನಮಂತ ದಾಳಿ, ಸದಾಶಿವ ಯತ್ನಟ್ಟಿ ಸೇರಿ ಇತರರಿದ್ದರು.

# ಬಸ್ ಸೌಕರ್ಯಕ್ಕಾಗಿ ಒತ್ತಾಯಿಸಿ ಪ್ರತಿಭಟನೆ

**ಜೇವರ್ಗಿ:** ಸಮರ್ಪಕಬಸ್‌ಸೌಕರ್ಯಒದಗಿಸುವಂತೆ ಒತ್ತಾಯಿಸಿ ಮಂಗಳವಾ ವಿವಿಧ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ತಹಶೀಲ್ದಾರ್ ಕಚೇರಿಯ ಎದುರು ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ವಿವಿಧ ಹಳ್ಳಿಗಳಿಂದ ನೂರಾರು ಜನ ವಿದ್ಯಾರ್ಥಿಗಳು ಬೆಳಿಗ್ಗೆ ಪಟ್ಟಣದ ಶಾಲಾ–ಕಾಲೇಜುಗಳಿಗೆ ಬಂದು ಹೋಗುತ್ತಾರೆ.

ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಹಾಜರಾಗಲು ಕಲಬುರಗಿ–ವಿಜಯಪುರ ಮಾರ್ಗವಾಗಿ ಸಂಚರಿಸುವ ಬಸ್‌ಗಳನ್ನು ಸೊನ್ನ, ಮಂದೇವಾಲ ಗ್ರಾಮಗಳಲ್ಲಿ ನಿಲ್ಲಿಸಬೇಕು. ಕಲಬುರಗಿ ಶಹಾಪುರ ಮಾರ್ಗವಾಗಿ ಸಂಚರಿಸುವ ಬಸ್‌ಗಳನ್ನು ಚಿಕ್ಕ ಮುದಬಾಳ, ಚಿಗರಹಳ್ಳಿ, ಹೆಲ್ಲೂರು ಗ್ರಾಮಗಳಲ್ಲಿ ನಿಲ್ಲಿಸಬೇಕು. ಪಟ್ಟಣದಿಂದ ಮಧ್ಯಾಹ್ನ ಹೊರಡುವ ನೆಲೋಗಿ, ಕೂಟನೂರ ಮಾರ್ಗವಾಗಿ ಸಂಚರಿಸುವ 20ಸಮಯವಿದ್ಯಾರ್ಥಿಗಳಿಗೆಅನುಕೂಲವಾಗುವಂತೆ ಮಾಡಿಕೊಡಬೇಕು’ಪ್ರತಿಭಟನಕಾರರುಆಗ್ರಹಿಸಿದರು. ಎಂದು

ಕಲ್ಲೂರ ರೇವನೂರ, ಮಾವನೂರ, ಗವನಹಳ್ಳಿ, ಕೂಟನೂರ, ನೆಲೋಗಿ, ಅಲೂರು, ಇಜೇರಿ ಮಾರ್ಗವಾಗಿ ಬೆಳಿಗ್ಗೆ ಮತ್ತು ಮಧ್ಯಾಹ್ನ ಬರುವ ಬಸ್‌ಗಳು

ಜೇವರ್ಗಿ ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಬಸ್ ಸೌಕರ್ಯ ಒದಗಿಸುವಂತೆ ಆಗ್ರಹಿಸಿ ತಹಶೀಲ್ದಾರ್ ಕಚೇರಿಯ ಎದುರು ಮಂಗಳವಾರ ಪ್ರತಿಭಟನೆ ನಡೆಸಲಾಯಿತು



ಸರಿಯಾದ ಸಮಯಕ್ಕೆ ಬರುವುದಿಲ್ಲ ಹಾಗೂ ಬಸ್‌ಗಳ ಸಂಖ್ಯೆ ಕಡಿಮೆ ಇರುವುದರಿಂದ ತೊಂದರೆಯಾಗುತ್ತಿದೆ. ಇದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಹಿನ್ನಡೆಯಾಗುತ್ತಿದೆ. ಈ ಕುರಿತು ಹಲವು ಬಾರಿ ಜೇವರ್ಗಿ ಬಸ್ ಘಟಕದ ವ್ಯವಸ್ಥಾಪಕರಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ.

ಕೂಡಲೇ ಸಮಸ್ಯೆ ಬಗೆಹರಿಸಿ ಅನುಕೂಲ ಕಲ್ಪಿಸಿಕೊಡಬೇಕು ಎಂದು ವಿದ್ಯಾರ್ಥಿಗಳು ಒತ್ತಾಯಿಸಿದರು.

ದಲಿತ ಈ ಸಂದರ್ಭದಲ್ಲಿ ಮುಖಂಡ ಸಿದ್ದರಾಮ ಕಟ್ಟಿಸಿದ್ದು ಕೆರೂರು ಧರ್ಮಣ್ಣ ಬಡಿಗೇರ, ಸುರೇಶ ಕುಮಾರ ಹಿರೇಮಠ, ಸಿದ್ದಲಿಂಗ ಎಸ್ ವಸ್ತಾರಿ, ಮಲ್ಲಿಕಾರ್ಜುನ್ ನೇದಲಗಿ, ಭೀಮಣ್ಣ ಗಂವ್ಹಾರ, ಸಂತೋಷ ಕುಮಾರ ಕಲ್ಲೂರ, ರೂಪಾ ಕಲ್ಲೂರ, ಸಾವಿತ್ರಿ ಮನಗೂಳಿ, ಚಂದ್ರಕಲಾ ಹಿಪ್ಪರಗಿ, ಶೃತಿ, ಅನಿತಾ, ಗೌರಮ್ಮ, ಭುವನೇಶ್ವರಿ ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಇದ್ದರು

# ಏಕತಾ ಸಮಾವೇಶಕ್ಕೆ ಬೆಂಬಲ

## ಬೆಳಗಾವಿಯಲ್ಲಿ ನಡೆದ ನಾಲ್ಕು ಜಿಲ್ಲೆಗಳ ಶಿವಾಚಾರ್ಯರು ಸಮಾವೇಶದಲ್ಲಿ ನಿರ್ಣಯ

**ಬೆಳಗಾವಿ :** ಹುಬ್ಬಳ್ಳಿಯಲ್ಲಿ ಸೆ.19ರಂದು ಜರಗುವ ವೀರಶೈವ– ಲಿಂಗಾಯತ ಏಕತಾ ಸಮಾವೇಶಕ್ಕೆ ಬೆಂಬಲ ನೀಡಲಾಗುವುದು ಎಂದು ಇಲ್ಲಿ ಸೋಮವಾರ ನಡೆದ ಮಠಾಧೀಶರ ಸಮಾವೇಶದಲ್ಲಿ ನಾಲ್ಕು ಜಿಲ್ಲೆಗಳ ಶಿವಾಚಾರ್ಯರು ನಿರ್ಣಯ ಕೈಗೊಂಡರು.

ಸಮೀಪದ ಭೂತರಾಮನ ಹಟ್ಟಿಯಲ್ಲಿರುವ ಪಂಚಗ್ರಾಮ ಮುಕ್ತಿಮಠದಲ್ಲಿ ಹಮ್ಮಿಕೊಂಡಿದ್ದ ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯ ವಿಭಾಗೀಯ ಸಮಾವೇಶದಲ್ಲಿ 100 ಶಿವಾಚಾರ್ಯರು ಪಾಲ್ಗೊಂಡಿದ್ದರು.

ಅಲ್ಲದೇ, ಸೆ.22 ರಿಂದ ನಡೆಯಲಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ನಿರ್ಣಯ ಅಂಗೀಕರಿಸಿದಂತೆ ಎಲ್ಲ ವೀರಶೈವ? ಲಿಂಗಾಯತರು ಸಮೀಕ್ಷೆ ನಮೂನೆಯ ಅನುಸೂಚಿಯಲ್ಲಿಯ ಧರ್ಮದ ಕಾಲಂ ಅಡಿಯಲ್ಲಿ ‘ಇತರೆ’ ಎಂದು ಹೇಳಿರುವ ಕಾಲಂನಲ್ಲಿ ‘ವೀರಶೈವ? ಲಿಂಗಾಯತ’ ಎಂದೇ ನಮೂದಿಸಬೇಕು. ಜಾತಿಯ ಕಾಲಂದಲ್ಲಿಯೂ ‘ವೀರಶೈವ? ಲಿಂಗಾಯತ’ ಎಂದೇ ಬರೆಸಬೇಕು ಎಂಬ ನಿರ್ಣಯವನ್ನು ಈ ಸಮಾವೇಶವು ಅನುಮೋದಿಸಿತು.

ಕೆಲವೇ ಮಠಾಧೀಶರು ಸಮಾಜದಲ್ಲಿ ದ್ವಂದ್ವ ಹುಟ್ಟುಹಾಕಿ ವೀರಶೈವಬೇರೆಲಿಂಗಾಯತಬೇರೆಎಂದುಭಕ್ತಸಮುದಾಯದ ಮನಸ್ಥಿತಿ ಸಂಕೀರ್ಣವಾಗುವಂತೆ ನೋಡಿಕೊಳ್ಳುತ್ತಿದ್ದಾರೆ. ಜೊತೆಗೆ, ಧರ್ಮದ ಮೂಲವಾಹಿನಿಯ ಪಂಚಪೀಠಗಳ ಪ್ರಾಚೀನ ಗುರುಪರಂಪರೆಗೆ ಧಕ್ಕೆ ಉಂಟು ಮಾಡುವಲ್ಲಿ ನಿರತರಾಗಿದ್ದಾರೆ. ಇದರ ವಿರುದ್ಧ ಸೆ.19ರಂದು ಹುಬ್ಬಳ್ಳಿಯ ಏಕತಾ ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳುವ ಕುರಿತೂ ಚರ್ಚಿಸಿದರು. ಅಖಿತ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯ ರಾಷ್ಟ್ರೀಯ ಉಪಾಧ್ಯಕ್ಷ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆ, ಮುಕ್ತಿಮಠದ ಶಿವಸಿದ್ಧ ಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಹಾಗೂ ಕಟಕೋಳ ಎಂ.ಚಂದರಗಿ ಹಿರೇಮಠದ ವೀರಭದ್ರ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಅಖಿಲ ಭಾರತ ಶಿವಾಚಾರ್ಯ ಸಂಸ್ಥೆಯ ಧಾರವಾಡ ಜಿಲ್ಲಾ ಘಟಕದ ಅಧ್ಯಕ್ಷ, ಶಿರಕೋಳದ ಗುರುಸಿದ್ಧ ಶಿವಾಚಾರ್ಯ ಸ್ವಾಮೀಜಿ, ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷ, ಸವದತ್ತಿ ಮೂಲಿಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಕೊಲ್ಲಾಪುರದ ಜಿಲ್ಲಾ ಘಟಕದ ಅಧ್ಯಕ್ಷ, ನೂಲಸುರಗೀಶ್ವರ ಮಠದ ಗುರುಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಉತ್ತರ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಅಂಬಿಕಾ ನಗರದ ವಿಶ್ವಾರಾಧ್ಯ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಬಾಗೋಜಿಕೊಪ್ಪ, ಬಿಚಗುತ್ತಿ ಹರಲಾಪುರ, ಹಳೇ ಹುಬ್ಬಳಿ, ಶಿವಾಪುರ, ಸತ್ತಿಗೇರಿ, ಸಂಗೊಳ್ಳಿ, ಸುತಗಟ್ಟಿ, ಮಾವಿನಕಟ್ಟಿ, ಶರಣಮಟ್ಟಿ, ಮಮದಾಪುರ, ಹೂಲಿ,ಮುತ್ನಾಳ, ಬನ್ನೂರ, ಪಾಶ್ಚಾಪುರ, ಕಬ್ಬೂರ,ಮುಳ್ಳೂರು,ಉಳ್ಳಾಗಡ್ಡಿಖಾನಾಪುರ,ನವಲಗುಂದ, ಹಿರೇಮುನ್ನಳ್ಳಿ, ಬ್ಯಾಹಟ್ಟಿ, ಅಮ್ಮಿನಬಾವಿ ಸೇರಿದಂತೆ ವಿವಿಧೆಡೆಯ ಶಿವಾಚಾರ್ಯರು ಭಾಗವಹಿಸಿದ್ದರು.

# ಸಂಘಟಿತ ಹೋರಾಟ ಅಗತ್ಯ

**ಜೇವರ್ಗಿ:** ‘ಸಮಾಜದಮುಂಚೂಣಿಗೆ ಬಂದು ಗುರುತಿಸಿಕೊಳ್ಳಲು ಹೂಗಾರ ಬಂಧುಗಳು ಶೈಕ್ಷಣಿಕವಾಗಿ ಪ್ರಗತಿ ಹೊಂದಬೇಕು’ ಎಂದು ಹೂಗಾರ ಸಮಾಜದ ತಾಲ್ಲೂಕು ಅಧ್ಯಕ್ಷ ಸಂಗಣ್ಣಹೂಗಾರ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಈಚೆಗೆ ಆಯೋಜಿಸಿದ್ದ ಹೂಗಾರ ಮಾದಯ್ಯ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.



ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದಿರುವ ನಮ್ಮ ಸಮುದಾಯದ ಪ್ರಗತಿಗೆ ಸಂಘಟಿತ ಹೋರಾಟದ ಅನಿವಾರ್ಯ ಇದೆ.

ಅನುಭವ ಮಂಟಪದಲ್ಲಿ ಮಾದಯ್ಯನವರು ಕಾಯಕ ದಾಸೋಹ ಕೈಗೊಂಡು ಮಹಾನ್ ಶರಣರಾಗಿದ್ದರು’ ಎಂದರು.

ಆದರ್ಶ ವಿದ್ಯಾಲಯದ ಮುಖ್ಯಶಿಕ್ಷಕ ಮಲ್ಲಿಕಾರ್ಜುನ ಹೂಗಾರ ಮಾತನಾಡಿ, ‘ಬಸವಾದಿ ಶರಣರಂತೆ ಹೂಗಾರ ಮಾದಯ್ಯ ಶರಣರು ವಚನಗಳ ಮೂಲಕ ಸಮಾಜಕ್ಕೆ ಬಹಳಷ್ಟು ಕೊಡುಗೆ ನೀಡಿದ್ದಾರೆ. ಅವರ ವಚನಗಳ ಅಧ್ಯಯನ ನಡೆಸಲು ಸರ್ಕಾರ ಮುಂದಾಗಬೇಕು’ ಎಂದು ಹೇಳಿದರು.

ಮುಖಂಡರಾದ ಬಿ.ಜಿ.ಹೂಗಾರ, ಸುಭಾಶ ಹೂಗಾರ, ಮಹೇಶ ಬಳಬಟ್ಟಿ,

ಮಲ್ಲಿಕಾರ್ಜುನ ಹೂಗಾರ ಕೋಳಕೂರ, ನಿಂಗಣ್ಣ ಹೂಗಾರ, ಶೈಲೇಶ ಹೂಗಾರ, ರೇವಣಸಿದ್ದಪ್ಪ ಹೂಗಾರ ಇದ್ದರು.

“SIHI KAHI” Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State